ಸಂಪುಟ: 05 ಸಂಚಿಕೆ: 345 ಪುಟಗಳು: 08 ಶುಕ್ರವಾರ 27 ಫೆಬ್ರವರಿ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com

ಸಂಪಾದಕರು: ಟಿ. ಹೊಂಬೇಗೌಡ RNI No. KARKAN/2021/80833 9448225696 +91 8035841833 ₹5

**ಮುಂಜಾನೆ ಮಾತು**

ಯಾರು ತನ್ನ ಹೃದಯದ ನೆತ್ತರದಿಂದ ಇತರರಿಗೆ ದಾರಿ ನಿರ್ಮಿಸುತ್ತಾನೋ ಅವನೇ ಶ್ರೇಷ್ಠ ವ್ಯಕ್ತಿ

ಉದಯ ವಾಹಿನಿ

UV ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ


## ವಿನ್ಯಾಸಗಾರರು ಬೇಕಾಗಿದ್ದಾರೆ

ಪೇಜ್ ಮೇಕರ್, ಇನ್ ಡಿಸೈನರ್, ಕನ್ನಡ ಟೈಪ್ ಮಾಡಬಲ್ಲವರು. ಬೆಂಗಳೂರಿನಲ್ಲಿ ವಾಸವಿರುವ



ಬೆಂಗಳೂರು ಕಚೇರಿಯಲ್ಲಿ ಕೆಲಸ ಮಾಡಲು ಇಚ್ಛಿಸುವ (4 ಮಂದಿ) ಪತ್ರಿಕೋದ್ಯಮದಲ್ಲಿ ತೀವ್ರ ಆಸಕ್ತಿ, ಕನ್ನಡ ಭಾಷೆಯ ಮೇಲೆ ಹಿಡಿತ, ಸಾಮಾನ್ಯ ಜ್ಞಾನ, ಓದುವ ಹವ್ಯಾಸ ಹಾಗೂ ಉತ್ಸಾಹ ಕಾತುರವಿರುವ ಆಸಕ್ತರಿಗೆ ನಿರ್ದಿಷ್ಟ ಪದವಿಯ ಅಗತ್ಯವಿಲ್ಲ.
ವಯೋಮಿತಿ ಗರಿಷ್ಠ 25 ವರ್ಷ.
ಆಸಕ್ತರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ತಮ್ಮ ಪೂರ್ಣ ವಿವರಗಳುಳ್ಳ ಅರ್ಜಿ ಸಲ್ಲಿಸಿ ಅಥವಾ ಮುಖತಃ ಭೇಟಿ ನೀಡಿ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ
**9448225696**

ಉದಯ ವಾಹಿನಿ

#: 1230 'JAYAMAHAL 13th cross, 2nd phase, Girinagar, Bangalore-560085. (Near to bangalore one park, opposite mandya medical)
udayavahininews@gmail.com


# ಆಂತರಿಕ ಜಗಳಗಳು ಅಲ್ಲೂ ಇದ್ದು, ಇಸ್ರೇಲ್‌ನ ವಿಪಕ್ಷ ನಾಯಕರು ಪ್ರಧಾನಿ ಮೋದಿ ಭಾಷಣವನ್ನು ಭಹಿಷ್ಕರಿಸಲಿಲ್ಲ

ಜಗತ್ತಿಗೆ ಮೋದಿ ಮೋಡಿ






## ಇಸ್ರೇಲ್ ಪರವಾಗಿ ನಿಂತಿದ್ದಕ್ಕೆ ಧನ್ಯವಾದ ಅರ್ಪಿಸಿದ ನೆತನ್ಯಾಹು

• ಉದಯವಾಹಿನಿ, ಬೆಂಗಳೂರು

ಪ್ರಧಾನಿ ಮೋದಿ ಅವರನ್ನು ಸ್ನೇಹಿತನಿಗಿಂತ ಹೆಚ್ಚು ಎಂದು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಬಣ್ಣಿಸಿದ್ದಾರೆ. ಇದೇ ವೇಳೆ ಅವರು ಅ.7, 2023ರ ಘೋರ ದಾಳಿಯ ನಂತರ ಇಸ್ರೇಲ್ ಪರವಾಗಿ ಭಾರತ ನಿಂತಿದ್ದಕ್ಕಾಗಿ ಅವರಿಗೆ ಧನ್ಯವಾದ ಅರ್ಪಿಸಿದರು. ಹಮಾಸ್ ನಡೆಸಿದ ಮಾರಕ ದಾಳಿಯನ್ನು ಖಂಡಿಸಿದ ಮೊದಲ ವಿಶ್ವನಾಯಕರಲ್ಲಿ ಮೋದಿ ಕೂಡಾ ಒಬ್ಬರು. ಇದರಲ್ಲಿ ಸುಮಾರು 1,200 ಇಸ್ರೇಲಿಗಳು ಸಾವನ್ನಪ್ಪಿದ್ದರು ಮತ್ತು ಸುಮಾರು 250 ಜನರನ್ನು ಅಪಹರಿಸಲಾಗಿತ್ತು. ಪ್ರಧಾನ ಮಂತ್ರಿಗಳು ಮತ್ತು ರಾಷ್ಟ್ರಗಳ ಮುಖ್ಯಸ್ಥರು ನೆಸ್ಸೆಟ್‌ಗೆ ಬರುತ್ತಾರೆ ಮತ್ತು ಇದು ನಮಗೆಲ್ಲರಿಗೂ ಯಾವಾಗಲೂ ರೋಮಾಂಚಕಾರಿ ಕ್ಷಣವಾಗಿದೆ. ಆದರೆ ನನ್ನ ಪ್ರೀತಿಯ ಸ್ನೇಹಿತ ನರೇಂದ್ರ ಮೋದಿ ಅವರೇ ಈ ನಿಮ್ಮ ಭೇಟಿಯಿಂದ ನಾನು ವಿಶೇಷವಾಗಿ ಭಾವುಕನಾಗಿದ್ದೇನೆ. ನೀವು ಇಸ್ರೇಲ್‌ನ ಉತ್ತಮ ಸ್ನೇಹಿತ ಮತ್ತು ವಿಶ್ವವೇದಿಕೆಯಲ್ಲಿ ಉತ್ತಮ ನಾಯಕ. ನೀವು ಸ್ನೇಹಿತನಿಗಿಂತ ಹೆಚ್ಚು. ನೀವು ಒಬ್ಬ ಸಹೋದರ ಎಂದು ನೆತನ್ಯಾಹು ತಮ್ಮ ಭಾಷಣದ ಆರಂಭದಲ್ಲಿ ಭಾವನಾತ್ಮಕವಾಗಿ ಹೇಳಿದರು.

**ಮೋದಿ ಸ್ನೇಹಿತನಿಗಿಂತ ಹೆಚ್ಚು ಎಂದು ಬಣ್ಣನೆ**

ನಾವು ನಮ್ಮ ಶೂಗಳನ್ನು ತೆಗೆದು ಸಮುದ್ರದಲ್ಲಿ ನಡೆದೆವು. ನಾವು ನೀರಿನ ಮೇಲೆ ನಡೆಯಲಿಲ್ಲ, ಆದರೆ, ಪವಾಡಗಳನ್ನು ಮಾಡಿದ್ದೇವೆ ಎಂದು ನೆತನ್ಯಾಹು ಹೇಳಿದರು.

2017ರಲ್ಲಿ ಪ್ರಧಾನಿಯಾಗಿ ಮೋದಿ ಇಸ್ರೇಲ್‌ಗೆ ಮೊದಲ ಭೇಟಿ ನೀಡಿದ ಸಂದರ್ಭದಲ್ಲಿ ಇಬ್ಬರು ನಾಯಕರು ಸಾಗರದಲ್ಲಿ ಬರಿಗಾಲಿನಲ್ಲಿ ನಡೆಯುತ್ತಿರುವ ವೈರಲ್ ಚಿತ್ರವನ್ನು ಉಲ್ಲೇಖಿಸಿ ಅವರು ಮಾತನಾಡಿದರು. ಇದು ಇಸ್ರೇಲ್‌ನಲ್ಲಿ ಪ್ರೀತಿಯ ಮಾತುಕತೆಗೆ ಕಾರಣವಾಯಿತು.

**ಇಸ್ರೇಲ್ ಪ್ರವಾಸದ ಸಂದರ್ಭದಲ್ಲಿ ವಿಶೇಷ ಚೇತನ ಕಲಾವಿದರು 'ಐ ಲವ್ ಮೈ ಇಂಡಿಯಾ' ಹಾಡಿನ ಪ್ರದರ್ಶನ ನೀಡಿದ್ದರು. ಇದನ್ನು ಪ್ರಧಾನಿ ಮೋದಿ ಮುಕ್ತಕಂಠದಿಂದ ಮೆಚ್ಚುಗೆ ಸೂಚಿಸಿದ್ದಾರೆ. ಈ ಪ್ರದರ್ಶನ ಭಾರತ ಮತ್ತು ಇಸ್ರೇಲ್ ನಡುವಿನ ಬಾಂಧವ್ಯವನ್ನು ಪ್ರತಿಬಿಂಬಿಸುತ್ತದೆ ಎಂದು ಮೋದಿ ಅಭಿಪ್ರಾಯಪಟ್ಟಿದ್ದಾರೆ. ಈ ಕುರಿತಾಗಿ ಎಕ್ಸ್ ಖಾತೆಯಲ್ಲಿ ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.**

**ಐ ಲವ್ ಮೈ ಇಂಡಿಯಾ ಪ್ರದರ್ಶನಕ್ಕೆ ಶ್ಲಾಘನೆ**

ಉಭಯ ದೇಶಗಳ ನಡುವೆ ದ್ವಿಪಕ್ಷೀಯ ವ್ಯಾಪಾರವು ಹೇಗೆ ದ್ವಿಗುಣಗೊಂಡಿದೆ ಎಂಬುದನ್ನು ಒಳಗೊಂಡಂತೆ ಜಂಟಿ ಯಶಸ್ಸನ್ನು ಇದೇ ವೇಳೆ ನೆತನ್ಯಾಹು ಪ್ರಸ್ತಾಪಿಸಿದರು. ಇಬ್ಬರು ನಾಯಕರ ನಡುವಿನ ವೈಯಕ್ತಿಕ ಬಾಂಧವ್ಯದ ಬಗ್ಗೆ ಇಸ್ರೇಲ್‌ನಲ್ಲಿ ಹೆಚ್ಚು ಪ್ರಚಾರ ಮಾಡಲಾಗಿದೆ. ಇದಕ್ಕೆ ಇಂಬು ನೀಡುವಂತೆ ನೆಸ್ಸೆಟ್‌ನಲ್ಲಿಯೂ ಸಹ ಇಬ್ಬರ ನಾಯಕರ ನಡುವಣ ದೀರ್ಘ ಅಪ್ಪುಗೆ ನೆರೆದಿದ್ದ ಜನಸಮೂಹ ಮತ್ತು ಸಂಸದರ ಕರತಾಡನದೊಂದಿಗೆ ಸ್ಪಷ್ಟವಾಗಿ ಗೋಚರಿಸಿತು. ಭಾರತವನ್ನು ಒಂದು ದೈತ್ಯ ದೇಶ ಎಂದು ವಿವರಿಸಿದ ಅವರು, ನಾಗರೀಕತೆಗಳು ಅಭಿವೃದ್ಧಿ ಹೊಂದಿದ ಎರಡು ಸ್ಥಳಗಳೆಂದರೆ ಸಿಂಧೂ ಕಣಿವೆ ಮತ್ತು ಜೋರ್ಡಾನ್ ಕಣಿವೆ. ನಾವಿಬ್ಬರೂ ಕಾಲದ ಯುಗಗಳನ್ನು ದಾಟಿ, ಬ್ರಿಟಿಷ್ ಆಳ್ವಿಕೆಯಿಂದ ಹೊರಬಂದೆವು. ನಾವು ಅನೇಕ ವೈಶಿಷ್ಟ್ಯಗಳನ್ನು ಹಂಚಿಕೊಂಡಿದ್ದೇವೆ.

ಕೆಲವೇ ಜನರಿಗೆ ಅರ್ಥವಾಗುವ ಸಂದರ್ಭಗಳಲ್ಲಿ ನಾವು ನಮ್ಮ ಪ್ರಜಾಪ್ರಭುತ್ವವನ್ನು ಕಾಪಾಡಿಕೊಳ್ಳುತ್ತೇವೆ ಎಂದು ಇಸ್ರೇಲಿ ನಾಯಕ ಬಣ್ಣಿಸಿದರು.

ಹಲವಾರು ಸುಧಾರಣೆಗಳನ್ನು ಜಾರಿಗೆ ತಂದಿದ್ದಕ್ಕಾಗಿ ಮೋದಿಯವರನ್ನು ಶ್ಲಾಘಿಸಿದ ನೆತನ್ಯಾಹು, ಭಾರತವು ಬಾಹ್ಯಾಕಾಶ ಮಹಾಶಕ್ತಿ ಮತ್ತು ಏಷ್ಯಾದ ಹುಲಿಯಾಗಿರುವುದರಿಂದ ಆಕಾಶಕ್ಕೆ ಮಿತಿಯಲ್ಲ ಎಂದು ಗುಣಗಾನ ಮಾಡಿದರು.

**ದೀರ್ಘ ಕರತಾಡನ:** ಅಕ್ಟೋಬರ್ 7, 2023 ರಂದು ಹಮಾಸ್ ದಾಳಿಯ ನಂತರ ಮೋದಿ ಇಸ್ರೇಲ್‌ಗೆ ಬೆಂಬಲವಾಗಿ ನಿಂತು ಅದನ್ನು ನಿಸ್ಸಂದಿಗ್ಧವಾಗಿ ಖಂಡಿಸಿದ ರೀತಿಯನ್ನು ನೆತನ್ಯಾಹು ನೆನಪಿಸಿಕೊಂಡಾಗ ನೆರೆದಿದ್ದ ಎಲ್ಲರಿಂದಲೂ ದೀರ್ಘ ಪ್ರಶಂಸೆ ಸಿಕ್ಕಿತು.

**ಇಸ್ರೇಲ್‌ನಲ್ಲಿ ನಿಮ್ಮ ಮೇಲಿನ ಪ್ರೀತಿಗೆ ಮತ್ತೊಂದು ಕಾರಣವಿದೆ:** ಅಕ್ಟೋಬರ್ 7 ರಂದು ನಡೆದ ಭೀಕರ ದಾಳಿಯ ನಂತರ, ನೀವು ಇಸ್ರೇಲ್ ಅನ್ನು ನೈತಿಕವಾಗಿ ಬೆಂಬಲಿಸಿದ್ದೀರಿ. ನೀವು ಹಿಂಜರಿಯಲಿಲ್ಲ, ನೀವು ಇಸ್ರೇಲ್ ಬೆನ್ನ ಹಿಂದೆ ನಿಂತಿದ್ದೀರಿ ಮತ್ತು ಯಹೂದಿಗಳಿಗೆ ಬೆಂಬಲ ಸೂಚಿಸಿದ್ದೀರಿ. ನಿಮಗೆ ಧನ್ಯವಾದಗಳು ಎಂದು ನೆತನ್ಯಾಹು ಹೇಳಿದರು.



**ಅಸ್ಥಿರ ಅವ್ಯವಸ್ಥೆ ಪ್ರದೇಶದಲ್ಲಿ ಬಂಡೆಯಂತೆ ನಿಂತಿದ್ದೇವೆ:** ಇಸ್ಲಾಮಿಕ್ ಭಯೋತ್ಪಾದನೆಯ ಅನಾಗರಿಕತೆಯ ವಿರುದ್ಧ ಇಸ್ರೇಲ್ ನಾಗರಿಕತೆಯು ಮುಂಚೂಣಿಯಲ್ಲಿದೆ. ಆದರೆ, ಈ ಜ್ವಾಲಾಮುಖಿಯ ಲಾವಾ ಪ್ರಪಂಚದಾದ್ಯಂತ ಹರಡಿದೆ. ಭಾರತ ಇಸ್ರೇಲ್ ಅನ್ನು ಬೆಂಬಲಿಸುತ್ತದೆ ಏಕೆಂದರೆ ಇಸ್ರೇಲ್ ಅನಾಗರಿಕತೆಯ ವಿರುದ್ಧ ಕಬ್ಬಿಣದ ಗೋಡೆಯಾಗಿ ನಿಂತಿದೆ. ಅಸ್ಥಿರ ಅವ್ಯವಸ್ಥೆಯ ಪ್ರದೇಶದಲ್ಲಿ ಪ್ರಜಾಪ್ರಭುತ್ವದ ಭದ್ರಕೋಟೆಯಾಗಿದೆ ಎಂದು ನೆತನ್ಯಾಹು ಬಣ್ಣಿಸಿದರು. ನಮ್ಮ ಸೈನಿಕರ ಶೌರ್ಯದಿಂದ ನಾವು ಪ್ರಜಾಪ್ರಭುತ್ವವನ್ನು ರಕ್ಷಿಸುತ್ತೇವೆ. ನಮ್ಮ ಕೆಲವು ಸೈನಿಕರು ಗಾಯಗೊಂಡಿದ್ದಾರೆ ಮತ್ತು ಅಂಗವಿಕಲರಾಗಿದ್ದಾರೆ ಎನ್ನುವ ಮೂಲಕ ಯುದ್ಧದಲ್ಲಿ ಭಾರತೀಯ ಮೂಲದ ಯಹೂದಿಗಳು ಮಾಡಿದ ಶೌರ್ಯ ಮತ್ತು ತ್ಯಾಗದ ಕಥೆಗಳನ್ನು ವಿವರಿಸಿದರು.

ದ್ವಿಪಕ್ಷೀಯ ಸಂಬಂಧಗಳನ್ನು ಮತ್ತಷ್ಟು ಎತ್ತರಕ್ಕೆ ಕೊಂಡೊಯ್ಯುವುದಾಗಿ ಪ್ರತಿಜ್ಞೆ ಮಾಡಿದ ಇಸ್ರೇಲ್ ಪ್ರಧಾನಿ, ವೈಯಕ್ತಿಕ ಮತ್ತು ರಾಜತಾಂತ್ರಿಕ ಸಂಬಂಧಗಳನ್ನು ಬಿಗಿಗೊಳಿಸಲು, ರಕ್ಷಣೆ, ಆರ್ಥಿಕತೆ, ವ್ಯಾಪಾರ, ಸೈಬರ್, ಎಐ ಮತ್ತು ಬಾಹ್ಯಾಕಾಶ ತಂತ್ರಜ್ಞಾನದಲ್ಲಿ ಸಹಕಾರವನ್ನು ಹೆಚ್ಚಿಸಲು ಮತ್ತು ಮಹತ್ವಾಕಾಂಕ್ಷೆಯ IMEC ಯೋಜನೆಯ ಯಶಸ್ವಿ ಅನುಷ್ಠಾನಕ್ಕೆ ಕೆಲಸ ಮಾಡುವುದಾಗಿ ಹೇಳಿದರು.

> ಮಧ್ಯಪ್ರಾಚ್ಯದಲ್ಲಿ ಶಾಶ್ವತ ಶಾಂತಿ ಸ್ಥಾಪನೆ ತುರ್ತು ಅಗತ್ಯವಿದೆ. ಈ ನಿಟ್ಟಿನಲ್ಲಿ ಗಾಜಾದಲ್ಲಿ ಶಾಂತಿ ಸ್ಥಾಪನೆಗೆ ಕೈಗೊಂಡಿರುವ ಕ್ರಮಗಳು ಸ್ವಾಗತಾರ್ಹವಾಗಿವೆ. ಶಾಂತಿ ಸ್ಥಾಪನೆಯ ಮಾರ್ಗ ಸುಲಭವಲ್ಲ. ಆದರೆ, ಮಾತುಕತೆ, ಸಂವಾದದ ಮೂಲಕ ಸಂಘರ್ಷ ಇತ್ಯರ್ಥಪಡಿಸಿಕೊಳ್ಳಲು ಭಾರತ ಬಯಸುತ್ತದೆ
> -ನರೇಂದ್ರ ಮೋದಿ, ಭಾರತದ ಪ್ರಧಾನಮಂತ್ರಿ

1. ಇಸ್ರೇಲ್ ಸಂಸತ್ತು ಕನೆಸೆಟ್ ನಲ್ಲಿ ಭಾರತದ ಪ್ರಧಾನಿ ನರೇಂದ್ರ ಮೋದಿ ಭಾಷಣ
2. ಭಯೋತ್ಪಾದನೆ ನಿಗ್ರಹಕ್ಕೆ ಇಸ್ರೇಲ್ ಜೊತೆ ಭಾರತ ನಿಲ್ಲಲಿದೆ ಎಂದು ಭರವಸೆ
3. ಇಸ್ರೇಲ್ ರಾಷ್ಟ್ರವಾಗಿ ಘೋಷಿಸಲ್ಪಟ್ಟ ದಿನವೇ ಹುಟ್ಟಿದ್ದೇ ಎಂದು ತಿಳಿಸಿದ ಮೋದಿ

### ಮಾನವೀಯತೆ ಎಂದಿಗೂ ಸಂಘರ್ಷಕ್ಕೆ ಬಲಿಯಾಗಬಾರದು

ಮಾನವೀಯತೆ ಎಂದಿಗೂ ಸಂಘರ್ಷಕ್ಕೆ ಬಲಿಪಶುವಾಗಬಾರದು ಎಂದು ಪ್ರಧಾನಿ ನರೇಂದ್ರ ಮೋದಿ ಕಾಳಜಿ ವ್ಯಕ್ತಪಡಿಸಿದ್ದಾರೆ. ಗಾಜಾ ಶಾಂತಿ ಯೋಜನೆಯು ಶಾಂತಿಯತ್ತ ಒಂದು ಮಾರ್ಗವನ್ನು ಸೃಷ್ಟಿಸಿದೆ. ಭಾರತವು ಈ ಪ್ರಯತ್ನಗಳನ್ನು ಸಂಪೂರ್ಣವಾಗಿ ಬೆಂಬಲಿಸಿದೆ. ಆದರೆ, ಮುಂದಿನ ದಿನಗಳಲ್ಲಿಯೂ ಸಹ ಭಾರತ ಎಲ್ಲಾ ದೇಶಗಳೊಂದಿಗೆ ಸಂವಾದ ಮತ್ತು ಸಹಕಾರವನ್ನು ಮುಂದುವರಿಸುತ್ತದೆ ಎಂದು ಮೋದಿ ಹೇಳಿದ್ದಾರೆ. ಭಯೋತ್ಪಾದನೆಯನ್ನು ಯಾವುದೇ ರೂಪದಲ್ಲಿ ಸ್ವೀಕರಿಸಲಾಗುವುದಿಲ್ಲ. ಭಯೋತ್ಪಾದನೆ ಮತ್ತು ಅದರ ಬೆಂಬಲಿಗರನ್ನು ವಿರೋಧಿಸುವಲ್ಲಿ ನಾವು ಹೆಗಲಿಗೆ ಹೆಗಲು ಕೊಟ್ಟು ನಿಂತಿದ್ದೇವೆ. ಮುಂದೆಯೂ ಅದನ್ನು ಮುಂದುವರಿಸುತ್ತೇವೆ. ಭಯೋತ್ಪಾದನೆಗೆ ಜಗತ್ತಿನಲ್ಲಿ ಸ್ಥಾನವಿಲ್ಲ'' ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಗಾಜಾದಲ್ಲಿನ ಪರಿಸ್ಥಿತಿಯ ಕುರಿತು ಭಾರತದ ನಿಲುವಿನ ಕುರಿತು ಮಾತನಾಡಿದ ಪ್ರಧಾನಿ ಮೋದಿ, ಗಾಜಾ ಶಾಂತಿ ಯೋಜನೆ ಶಾಂತಿಗೆ ಮಾರ್ಗವನ್ನು ತೆರೆದಿದೆ. ಮುಂದಿನ ದಿನಗಳಲ್ಲೂ ಭಾರತವು ಎಲ್ಲಾ ರಾಷ್ಟ್ರಗಳೊಂದಿಗೆ ಸಹಕರಿಸುವುದನ್ನು ಮತ್ತು ಸಂವಾದವನ್ನು ಮುಂದುವರಿಸುತ್ತದೆ'' ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.

## ವೈವಾಹಿಕ ವ್ಯಾಜ್ಯಗಳಲ್ಲಿ ಐಟಿ ವಿವರ ನೀಡಿಕೆ ಅವಕಾಶ ಇಲ್ಲ

• ಉದಯವಾಹಿನಿ, ಬೆಂಗಳೂರು

ಸಿಪಿಐ ಪಕ್ಷದ ಸದಸ್ಯ, ಸಾಹಿತಿ, ಸಂಶೋಧಕರಾದ ಜಿ ರಾಮಕೃಷ್ಣ ಅವರ 'ವೈವಾಹಿಕ ವ್ಯಾಜ್ಯಗಳಲ್ಲಿ ದಂಪತಿಗಳ ಆದಾಯ ತೆರಿಗೆ ಪಾವತಿ ವಿವರವನ್ನು ಮಾಹಿತಿ ಹಕ್ಕು ಕಾಯ್ದೆ (ಆರ್‌ಟಿಐ) ಅಡಿಯಲ್ಲಿ ಪಡೆಯುವುದಕ್ಕೆ ಅವಕಾಶ ಇಲ್ಲ' ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ. 'ಪತಿಯ ಆದಾಯ ತೆರಿಗೆ ಪಾವತಿಗೆ ಸಂಬಂಧಿಸಿದ ವಿವರವನ್ನು ಪತ್ನಿಗೆ ಒದಗಿಸಬೇಕು' ಎಂದು ಪ್ರಕರಣವೊಂದರಲ್ಲಿ ಕೇಂದ್ರ ಮಾಹಿತಿ ಆಯೋಗ ನೀಡಿದ್ದ ಆದೇಶ ಪ್ರಶ್ನಿಸಿ ತೆರಿಗೆ ಇಲಾಖೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ. ಅಂತೆಯೇ, ಕೇಂದ್ರ ಮಾಹಿತಿ ಆಯೋಗದ ಆದೇಶವನ್ನು ರದ್ದುಪಡಿಸಿದೆ. ಪಕ್ಷಗಾರರ ಆದಾಯಕ್ಕೆ ಸಂಬಂಧಿಸಿದಂತೆ ವಿವಾದಗಳಿದ್ದಲ್ಲಿ ಆದಾಯ ತೆರಿಗೆ ಪಾವತಿ ಮತ್ತು ಹಣಕಾಸು ದಾಖಲೆ ಸೇರಿದಂತೆ ಅಗತ್ಯ ಸಾಕ್ಷ್ಯಾಧಾರಗಳನ್ನು ಪಡೆದುಕೊಳ್ಳಲು ಆದಾಯ ತೆರಿಗೆ ಇಲಾಖೆ, ಬ್ಯಾಂಕ್ ಸೇರಿದಂತೆ ಆರ್ಥಿಕ ವ್ಯವಹಾರಗಳ ಸಂಸ್ಥೆಗಳಿಗೆ ವಿಚಾರಣಾ ನ್ಯಾಯಾಲಯ ಸಮನ್ಸ್ ಜಾರಿಗೊಳಿಸುವ ಅಧಿಕಾರವನ್ನು ಸ್ವಯಂ ಪ್ರೇರಿತವಾಗಿ ಬಳಸಿ ಕೊಳ್ಳಬಹುದಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.

## ಗ್ರಾಮಾಂತರ ಪ್ರದೇಶಗಳಲ್ಲಿ ವೈ-ಫೈ ಯೋಜನೆಗೆ ಚಾಲನೆ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕೆಲವು ದುರ್ಗಮ ಪ್ರದೇಶಗಳಲ್ಲಿ ವೈ-ಫೈ ಸೌಲಭ್ಯ ಕಲ್ಪಿಸುವ ಉದ್ದೇಶದ ಯೋಜನೆಗೆ ಕೇಂದ್ರದ ಮಾಜಿ ಸಚಿವ ಅನಂತಕುಮಾರ ಹೆಗಡೆ ಬೆಂಗಳೂರಿನಲ್ಲಿ ಚಾಲನೆ ನೀಡಿದರು. ಇದರ ಭಾಗವಾಗಿ ಉತ್ತರ ಕನ್ನಡ ಜಿಲ್ಲೆಯ ಯಾಣ ಹಾಗೂ ಸಹಸ್ರಲಿಂಗದಲ್ಲಿ ಸಾರ್ವಜನಿಕ ವೈ-ಫೈ ಸೌಲಭ್ಯ ಆರಂಭಿಸಲಾಗಿದೆ ಎಂದು ಜಿಎನ್‌ಎ ಇಂಡಿಯಾ ಕಂಪನಿಯ ಸಿಇಒ ನಾಗರಾಜ ಮುನಿದಾಸಪ್ಪ ತಿಳಿಸಿದರು. ಈ ಕಂಪನಿಯು ಯೋಜನೆಯ ಅಡಿಯಲ್ಲಿ ವೈ-ಫೈ ಕೇಂದ್ರಗಳನ್ನು ಆರಂಭಿಸುತ್ತಿದೆ.

'ಆರಂಭಿಕ ಹೆಜ್ಜೆಯಾಗಿ ನಾವು ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ಯಾಣ ಹಾಗೂ ಸಹಸ್ರಲಿಂಗದಲ್ಲಿ ಈ ಸೌಲಭ್ಯ ಆರಂಭಿಸಿದ್ದೇವೆ. ಮುಂದಿನ ದಿನಗಳಲ್ಲಿ ಇದನ್ನು ರಾಜ್ಯದ ಇನ್ನಷ್ಟು ಸ್ಥಳಗಳಿಗೆ ವಿಸ್ತರಿಸಲಿದ್ದೇವೆ. ಜನರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ, ಇಂಟರ್ನೆಟ್ ಇನ್ನೂ ತಲುಪಿಲ್ಲದ ಸ್ಥಳಗಳನ್ನು ಗುರುತಿಸಿ ಅಲ್ಲಿ ವೈ-ಫೈ ಸೌಲಭ್ಯ ಆರಂಭಿಸಲಾಗುವುದು' ಎಂದು ನಾಗರಾಜ ಅವರು ತಿಳಿಸಿದರು.

ವೈ-ಫೈ ಸೌಲಭ್ಯ ಕಲ್ಪಿಸಲು ಜಿಎನ್‌ಎ ಕಂಪನಿಯು ಬಿಎಸ್‌ಎನ್‌ಎಲ್ ಜೊತೆ ಒಪ್ಪಂದ ಮಾಡಿಕೊಂಡಿದೆ.

ಜನರು ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುವ ಸ್ಥಳಗಳಲ್ಲಿ ಇಂಟರ್ನೆಟ್ ಸೌಲಭ್ಯ ಇಲ್ಲವೆಂದಾದರೆ ಅಲ್ಲಿ ಯುಪಿಐ ಪಾವತಿಯಿಂದ ಆರಂಭಿಸಿ ಇಂಟರ್ನೆಟ್ ಆಧಾರಿಸಿದ ಯಾವ ಅನುಕೂಲಗಳೂ ಲಭ್ಯವಾಗುವುದಿಲ್ಲ. ಹೀಗಾಗಿ ಈ ಯೋಜನೆ ಆರಂಭಿಸಲಾಗಿದೆ ಎಂದು ನಾಗರಾಜ ಹೇಳಿದರು.

## ಬೆಂಗಳೂರು ಗ್ರಾಮಾಂತರ ಉಪನಗರ ವರ್ತುಲ ರಸ್ತೆ: ಯೋಜನೆ ಜಾರಿ

• ಉದಯವಾಹಿನಿ, ಬೆಂಗಳೂರು

ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದಲ್ಲಿ ಉಪನಗರ ವರ್ತುಲ ರಸ್ತೆ ಯೋಜನೆಯನ್ನು ಶೀಘ್ರವಾಗಿ ಅನುಷ್ಠಾನಗೊಳಿಸುವ ಹಾಗೂ ಭೂಮಿ ಕಳೆದುಕೊಂಡಿರುವ ರೈತರಿಗೆ ತ್ವರಿತವಾಗಿ ಪರಿಹಾರ ನೀಡುವ ಬಗ್ಗೆ ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರದ ಮಟ್ಟದಲ್ಲಿ ನಡೆಸಿರುವ ಪ್ರಯತ್ನಗಳು ಫಲಪ್ರದವಾಗುವ ದಿಕ್ಕಿನಲಿವೆ.

**ಭೂ ಪರಿಹಾರಕ್ಕೆ ಶೀಘ್ರದಲ್ಲೇ ಒಪ್ಪಿಗೆ**

ಈ ಬಗ್ಗೆ ಸಚಿವ ಕುಮಾರಸ್ವಾಮಿ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಹಾಗೂ ಕೇಂದ್ರದ ಭೂ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವರಾದ ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದು ವಿನಂತಿಸಿದ್ದರು. ಅಲ್ಲದೆ, ಹಲವು ಬಾರಿ ನವದೆಹಲಿಯಲ್ಲಿ ಇಬ್ಬರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದರು.

ಈ ಯೋಜನೆಗಾಗಿ ಸ್ವಾಧೀನಪಡಿಸಿಕೊಂಡ ಭೂಮಿಗೆ ತ್ವರಿತವಾಗಿ ಪರಿಹಾರವನ್ನು ಬಿಡುಗಡೆ ಮಾಡಲು ಸಚಿವ ಸಂಪುಟದ ಅನುಮೋದನೆ ಕೋರುವ ಕುರಿತು ಕಳೆದ ಡಿಸೆಂಬರ್ ತಿಂಗಳಲ್ಲಿಯೇ ಕೇಂದ್ರ ಸಚಿವರಾದ ಕುಮಾರಸ್ವಾಮಿ ಅವರು ನಿತಿನ್ ಗಡ್ಕರಿ ಅವರಿಗೆ ಪತ್ರ ಬರೆದಿದ್ದರು.

ಈ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಗಡ್ಕರಿ ಅವರು ನಿಮ್ಮ ಮನವಿಯನ್ನು, ಅದರ ಸಾಧಕ ಬಾಧಕಗಳನ್ನು ಕೂಲಂಕಷವಾಗಿ ಪರಿಶೀಲಿಸಿದ್ದೇನೆ. ಭೂ ಪರಿಹಾರ ನೀಡುವ ಬಗ್ಗೆ ಸಂಪುಟದ ಅನುಮೋದನೆ ಅಗತ್ಯವಾಗಿದ್ದು, ಅದಕ್ಕಾಗಿ ತಮ್ಮ ಮನವಿ ಪತ್ರ ಹಾಗೂ ಅದಕ್ಕೆ ಸಂಬಂಧಿತ ಪ್ರಸ್ತಾವನೆಯನ್ನು ಪ್ರಧಾನಿಗಳ ಕಾರ್ಯಾಲಯಕ್ಕೆ ರವಾನಿಸಿದ್ದೇನೆ ಎಂದು ಗಡ್ಕರಿ ಅವರು ಕುಮಾರಸ್ವಾಮಿ ಅವರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಈ ಬಗ್ಗೆ ಮಾಧ್ಯಮಗಳಿಗೆ ಮಾಹಿತಿ ನೀಡಿರುವ ಸಚಿವ ಕುಮಾರಸ್ವಾಮಿ ಅವರು; ಸದರಿ ಯೋಜನೆಯು ಅನುಮೋದನೆಗಾಗಿ ಪರಿಗಣನೆಯಲ್ಲಿದೆ. ಯೋಜನೆಯ ಹೂಡಿಕೆಗೆ ಅನುಮೋದನೆ ನೀಡಿದ ನಂತರವೇ ಪರಿಹಾರ ವಿತರಣೆಯನ್ನು ಪುನರಾರಂಭಿಸಬಹುದು ಎಂದು ಹೆದ್ದಾರಿ ಸಚಿವರು ಪತ್ರ ಮುಖೇನ ನನಗೆ ತಿಳಿಸಿದ್ದಾರೆ. ಹೀಗಾಗಿ ಭೂಮಿ ಕಳೆದುಕೊಂಡಿರುವ ರೈತರು ಆತಂಕಕ್ಕೆ ಒಳಗಾಗುವ ಅಗತ್ಯವಿಲ್ಲ ಎಂದು ಅವರು ಸ್ಪಷ್ಟವಾಗಿ ತಿಳಿಸಿದ್ದಾರೆ.



**ಪ್ರಧಾನಿಗೂ ಪತ್ರ ಬರೆದಿದ್ದ ಕೇಂದ್ರ ಸಚಿವರು**

ಬೆಂಗಳೂರು ಗ್ರಾಮೀಣ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮಾಗಡಿ, ರಾಮನಗರ, ಕನಕಪುರ, ಹಾರೋಹಳ್ಳಿ ಮತ್ತು ಆನೇಕಲ್ ಪ್ರದೇಶಗಳಲ್ಲಿ ಉಪನಗರ ಹೊರವರ್ತುಲ ರಸ್ತೆ (ಪಶ್ಚಿಮ ಭಾಗ) ಯೋಜನೆಗಾಗಿ ಭೂಮಿ ಕಳೆದುಕೊಂಡಿರುವ ಸಾವಿರಾರು ರೈತರು ಸಂಕಷ್ಟ ಎದುರಿಸುತ್ತಿದ್ದಾರೆ ಎಂದು ಪ್ರಧಾನಿಗಳಿಗೆ ಬರೆದಿರುವ ಪತ್ರದಲ್ಲಿ ಕೇಂದ್ರ ಸಚಿವರು ಗಮನ ಸೆಳೆದಿದ್ದರು.

ರಾಷ್ಟ್ರೀಯ ಹೆದ್ದಾರಿ 948Aಗೆ ಸಂಪರ್ಕ ಕಲ್ಪಿಸುವ ನೆಲಮಂಗಲ ತಾಲ್ಲೂಕಿನ ಓಬಳಾಪುರದಿಂದ ರಾಮನಗರ ತಾಲ್ಲೂಕಿನ ಕುಣಗಾಲುವರೆಗೆ ಹಾಗೂ ರಾಮನಗರದ ಕುಣಗಾಲು ನಿಂದ ಹೊಸೂರು ತಾಲ್ಲೂಕಿನ ಎಸ್. ಮುದುಗದಪಲ್ಲಿವರೆಗೆ ಉಪನಗರ ವರ್ತುಲ ರಸ್ತೆ ನಿರ್ಮಾಣ ಯೋಜನೆಯನ್ನು ಅನುಷ್ಠಾನಗೊಳಿಸುವ ಹಾಗೂ ರೈತರಿಗೆ ಭೂ ಪರಿಹಾರ ನೀಡುವ ಬಗ್ಗೆ ಸಚಿವ ಕುಮಾರಸ್ವಾಮಿ ಅವರು ಪತ್ರದಲ್ಲಿ ಉಲ್ಲೇಖಿಸಿದ್ದರು.

ಈಗಾಗಲೇ 2023ರವರೆಗೆ ಮೇಲಿನ ಎರಡು ವಿಭಾಗಗಳಲ್ಲಿ 216.92 ಕೋಟಿ ಹಾಗೂ 52.70 ಕೋಟಿ ಭೂ ಪರಿಹಾರವನ್ನು ವಿತರಣೆ ಮಾಡಲಾಗಿದೆ ಎಂಬ ಅಂಶವನ್ನು ಗಡ್ಕರಿ ಅವರು ತಮಗೆ ಬರೆದಿರುವ ಪತ್ರದಲ್ಲಿ ಉಲ್ಲೇಖ ಮಾಡಿದ್ದಾರೆ ಎಂದು ಸಚಿವರಾದ ಕುಮಾರಸ್ವಾಮಿ ಅವರು ಮಾಹಿತಿ ನೀಡಿದ್ದಾರೆ.

## ಆರೋಗ್ಯ ಇಲಾಖೆಯಿಂದ ಉರ್ದು ಭಾಷೆಯಲ್ಲಿ ಆಹ್ವಾನ ಪತ್ರಿಕೆ ವಿವಾದ

### ● ನೆಲ, ಜಲ, ಭಾಷೆಯ ಕಾಳಜಿಯ ಬಗ್ಗೆ ಬಿಜೆಪಿಗರಿಂದ ಪಾಠ ಹೇಳಿಸಿಕೊಳ್ಳಬೇಕಾದ ದರಿದ್ರ ಸ್ಥಿತಿ ಬಂದಿಲ್ಲ

• ಉದಯವಾಹಿನಿ, ಬೆಂಗಳೂರು

ಹಿಮೋಫಿಲಿಯಾ ರೋಗಿಗಳಿಗೆ ರೋಗ ನಿರೋಧಕ ಚಿಕಿತ್ಸೆ ಮತ್ತು ಉಚಿತ ಅಂಬುಲೆನ್ಸ್ ಸೇವೆಗೆ ಚಾಲನೆ ನೀಡುವ ಆರೋಗ್ಯ ಇಲಾಖೆಯ ಕಾರ್ಯಕ್ರಮದ ಆಹ್ವಾನ ಪತ್ರಿಕೆಯನ್ನು ಉರ್ದು ಭಾಷೆಯಲ್ಲಿ ಪ್ರಕಟ ಮಾಡಲಾಗಿದೆ ಎಂಬ ಆರೋಪ ಚರ್ಚೆಗೆ ಗ್ರಾಸವಾಗಿತ್ತು. ವಿಪಕ್ಷ ನಾಯಕ ಆರ್ ಅಶೋಕ್ ಸೇರಿದಂತೆ ಬಿಜೆಪಿ ನಾಯಕರು ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು. ಸರ್ಕಾರಿ ಕನ್ನಡ ವಿರೋಧಿಯಾಗಿ ನಡೆದುಕೊಳ್ಳುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದರು. ಇದು ವಿವಾದದ ಸ್ವರೂಪ ಪಡೆದುಕೊಳ್ಳುತ್ತಿದ್ದಂತೆ ಸಿಎಂ ಸಿದ್ದರಾಮಯ್ಯ ಅವರು ಈ ಬಗ್ಗೆ ಸ್ಪಷ್ಟನೆ ನೀಡಿದ್ದಾರೆ.

ಕರ್ನಾಟಕ ರಾಜ್ಯ ಅಧಿಕೃತ ಭಾಷಾ ಕಾಯ್ದೆಯಲ್ಲಿ ಉರ್ದುವಿಗೆ ಇಲ್ಲ ಸ್ಥಾನ ಮಾನ ಇಲ್ಲದೆ ಇದ್ದರೂ, ಅಲ್ಪಸಂಖ್ಯಾತ ಓಲೈಕೆ ಕಾರಣಕ್ಕೆ ಹೊಸ ಪದ್ಧತಿಗೆ ನಾಂದಿ ಹಾಡಿದ್ದಾರೆ ಎಂದು ಬಿಜೆಪಿ ಆರೋಪ ಮಾಡಿತ್ತು. ಅಧಿಕೃತವಲ್ಲದ ಭಾಷೆಯಲ್ಲೂ ಆಹ್ವಾನ ಪತ್ರಿಕೆ ಪ್ರಕಟಿಸಿ ಓಲೈಕೆ ರಾಜಕಾರಣ ಮಾಡುತ್ತಿದೆ ಎಂದು ಆರೋಪ ಮಾಡಿತ್ತು.

ಉರ್ದು ಪತ್ರಿಕೆಯಲ್ಲಿ ಸರ್ಕಾರದ ಜಾಹೀರಾತೊಂದು ಉರ್ದು ಭಾಷೆಯಲ್ಲಿ ಪ್ರಕಟಗೊಂಡಿದ್ದನ್ನು ವಿರೋಧಿಸಿ ವಿಪಕ್ಷಗಳ ನಾಯಕರು ಆಡಿರುವ ವೀರಾವೇಶದ ಮಾತುಗಳನ್ನು ಆಲಿಸಿದೆ. ಹಿಂದೆ ತಾವೇ ಅಧಿಕಾರದಲ್ಲಿ ಇದ್ದಾಗ ಉರ್ದು ಭಾಷೆಯ ಜಾಹೀರಾತು ನೀಡಿ, ಈಗ ನಮ್ಮ ವಿರುದ್ಧ ಮುಗಿಬೀಳುವುದು ಆತ್ಮವಂಚನೆ ಮತ್ತು ಅಸಹ್ಯದ ಪರಮಾವಧಿ. ಬಿ.ಎಸ್.ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಅಧಿಕಾರದಲ್ಲಿದ್ದಾಗ ಯಾರ ಓಲೈಕೆ ಮಾಡಲು ಉರ್ದು ಜಾಹೀರಾತು ನೀಡಿದ್ದರು? ಎಂದು ಹೇಳಿ ಪುಣ್ಯಕಟ್ಟಿಕೊಳ್ಳಿ ಎಂದು ತಿರುಗೇಟು ನೀಡಿದ್ದಾರೆ.




**ಬಿಜೆಪಿ ನಾಯಕರ ಬುದ್ಧಿ ಮಂಕಾಗಿದೆಯೇ?**

ಸರ್ಕಾರದ ಕಾರ್ಯಕ್ರಮಗಳು, ಯೋಜನೆಗಳ ಮಾಹಿತಿಯನ್ನು ಜನರಿಗೆ ತಲುಪಿಸುವ ಉದ್ದೇಶದಿಂದಲೇ ಸರ್ಕಾರ ಜಾಹೀರಾತು ನೀಡುತ್ತದೆ. ಹೆಚ್ಚೆಚ್ಚು ಜನರನ್ನು ತಲುಪುತ್ತದೆ ಎನ್ನುವ ಕಾರಣಕ್ಕಾಗಿ ಆಯಾ ಭಾಷೆಯ ಪತ್ರಿಕೆಗಳಲ್ಲಿ ಅದೇ ಭಾಷೆಯ ಜಾಹೀರಾತು ನೀಡುವುದು ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿ. ಇದರಿಂದ ಪತ್ರಿಕೆಯ ಓದುಗರಿಗೆ ಜಾಹೀರಾತಿನ ವಿಚಾರ ಅರ್ಥವಾಗಿ, ಜಾಹೀರಾತು ನೀಡಿದ ಉದ್ದೇಶವೂ ಈಡೇರುತ್ತದೆ ಎಂದು ಹೇಳಿದ್ದಾರೆ.

ಬಿಜೆಪಿನಾಯಕರು ಒಂದಲ್ಲ, ಎರಡಲ್ಲ ಹತ್ತಾರು ಬಾರಿ ಉರ್ದು ಜಾಹೀರಾತುಗಳನ್ನು ನೀಡಿದ್ದಾರೆ, ಆಗ ಅವರಿಗೆ ಅದು ತುಷ್ಟೀಕರಣ ಅನ್ನಿಸಲಿಲ್ಲ. ಈಗ ನಮ್ಮ ಸರ್ಕಾರ ನೀಡಿರುವ ಉರ್ದು ಜಾಹೀರಾತು ಕಂಡೊಡನೆ ಅವರೊಳಗಿನ ಕನ್ನಡಪ್ರೇಮ ಇದ್ದಕ್ಕಿದ್ದಂತೆ ಎದ್ದುನಿಂತಿದೆ. ನಿಮ್ಮ ಈ 'ಹಿಪೋಕ್ರಸಿ' ಗೋಸುಂಬೆಯನ್ನೇ ನಾಚಿಸುವಂತಿದೆ ಎಂದು ಆಕ್ರೋಶ ಹೊರಹಾಕಿದ್ದಾರೆ. ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ್ದ ದಿನೇಶ್ ಗುಂಡೂರಾವ್, ಒಂದು ಅಧಿಕೃತ ಆಮಂತ್ರಣ ಪತ್ರಿಕೆಗೂ ಮತ್ತು ಪತ್ರಿಕಾ ಜಾಹಿರಾತಿಗೂ ವ್ಯತ್ಯಾಸ ತಿಳಿಯದಷ್ಟು ಬಿಜೆಪಿ ನಾಯಕರ ಬುದ್ಧಿ ಮಂಕಾಗಿದೆಯೇ? ಅಥವಾ ಜನರನ್ನು ದಾರಿ ತಪ್ಪಿಸಲೇಬೇಕು ಎನ್ನುವ ಹಠಕ್ಕೆ ಬಿದ್ದಿದ್ದೀರಾ? ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ವಾಗ್ದಾಳಿ ನಡೆಸಿದ್ದರು.

ಆರೋಗ್ಯ ಇಲಾಖೆಯ ಜಾಹಿರಾತನ್ನು ಹಿಡಿದು ನಾಡದ್ರೋಹಿ ಎಂದು ಬೊಬ್ಬೆ ಹೊಡೆಯುತ್ತಿರುವ ಬಿಜೆಪಿ ಮಿತ್ರರೇ, ವಿಶ್ವಗುರು ಫೋಟೋ ಸೇರಿಸಿ ನಿಮ್ಮದೇ ಅಧಿಕಾರಾವಧಿಯ ಎಷ್ಟು ಜಾಹಿರಾತು ನೀಡಿದ್ದೀರಾ ಅಂತ ಒಮ್ಮೆ ತಿರುಗಿ ನೋಡಿ.

ಇನ್ನೂ ನಮ್ಮ ಮನೆಯ ಆಡುಭಾಷೆಯ ಬಗ್ಗೆ ಅತಿಯಾದ ಆಸಕ್ತಿ ತೋರುತ್ತಿರುವ ನಿಮಗೆ ನಾನೊಂದು ಸೌಹಾರ್ದಯುತ ಆಹ್ವಾನ ನೀಡುತ್ತಿದ್ದೇನೆ. ಒಮ್ಮೆ ನಮ್ಮ ಮನೆಗೆ ಬನ್ನಿ, ನಿಮ್ಮನ್ನು ಸತ್ಕರಿಸುವುದಕ್ಕೆ ನಮಗೆ ಖುಷಿಯಿದೆ. ಜೊತೆಯಾಗಿ ಕೂತು ಊಟ ಮಾಡೋಣ, ವಿಶ್ವಾಸದಿಂದ ಮಾತಾಡೋಣ. ರಾಷ್ಟ್ರಕವಿ ಕುವೆಂಪು ಅವರು ಹೇಳಿದಂತೆ ''ಸರ್ವ ಜನಾಂಗ ಶಾಂತಿಯ ತೋಟ'' ನಿರ್ಮಿಸೋಣ ಎಂದು ಮನವಿ ಮಾಡಿದ್ದರು.

**ಬಿಜೆಪಿ ನಾಯಕರೆಲ್ಲರೂ ನಾಡದ್ರೋಹಿಗಳಾ?**

ಬಿ.ಎಸ್. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರು ಅಧಿಕಾರದಲ್ಲಿದ್ದಾಗ ಉರ್ದು ಪತ್ರಿಕೆಗಳಲ್ಲಿ ಜಾಹಿರಾತುಗಳು ಪ್ರಕಟವಾಗಿರಲಿಲ್ಲವೇ? ನಿಮ್ಮ ತರ್ಕದ ಪ್ರಕಾರ ನೋಡೋದಾದ್ರೆ, ಅಂದು ಉರ್ದುವಿನಲ್ಲಿ ಜಾಹಿರಾತು ನೀಡಿದ್ದ ಬಿಜೆಪಿ ನಾಯಕರೆಲ್ಲರೂ ನಾಡದ್ರೋಹಿಗಳಾ? ಅಥವಾ ಬಿಜೆಪಿ ಮಾಡಿದಾಗ ಅದು ಮಾಹಿತಿ ಪ್ರಸಾರ, ಕಾಂಗ್ರೆಸ್ ಮಾಡಿದರೆ ಅದು ನಾಡದ್ರೋಹವಾ?!! ಇಲ್ಲಿ ಯಾವುದೇ ಆಮಂತ್ರಣ ಪತ್ರಿಕೆ ಉರ್ದುವಿನಲ್ಲಿಲ್ಲ; ಆಯಾ ಭಾಷೆಯ ಓದುಗರಿಗೆ ಮಾಹಿತಿ ತಲುಪಿಸಲು ಪತ್ರಿಕೆಗಳ ಭಾಷೆಯಲ್ಲೇ ಜಾಹಿರಾತು ನೀಡುವುದು ಆಡಳಿತದ ಸಾಮಾನ್ಯ ಪ್ರಕ್ರಿಯೆ ಎಂಬ ಕನಿಷ್ಠ ಜ್ಞಾನವೂ ಇಲ್ಲದಿರುವುದು ನಿಮ್ಮ ರಾಜಕೀಯ ದಿವಾಳಿತನಕ್ಕೆ ಮತ್ತೊಮ್ಮೆ ಸಾಕ್ಷಿಯಾಗಿದೆ.

**ಈ ದಿನದ ದರ** ಪೆಟ್ರೋಲ್: 102.98 ₹/L ಡೀಸೆಲ್ : 91.52 ₹/L ಬಂಗಾರ: ₹16,102/Gram24ct ₹14,760/Gram22ct ಬೆಳ್ಳಿ: ₹285.00/Gram

ಅಂತರಾಳದಿಂದ... EDITORIAL

# ಯುವಜನರ ದನಿ ನಿರ್ಲಕ್ಷ್ಸಿಸದಿರಿ: ದುಡಿಯುವ ಕೈಗೆ ಕೆಲಸ ಕೊಡಿ



ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಅಧಿಸೂಚನೆ ಹೊರಡಿಸುವಂತೆ 'ಅಖಿಲ ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಸಂಘಟನೆ' ಫೆ. 24ರಂದು ಧಾರವಾಡದಲ್ಲಿ ನಡೆಸಿದ ಬೃಹತ್ ಪ್ರತಿಭಟನೆ, ಯುವಜನರ ಉದ್ಯೋಗದ ನಿರೀಕ್ಷೆಗಳಿಗೆ ಸ್ಪಂದಿಸದಿರುವ ರಾಜ್ಯ ಸರ್ಕಾರದ ವೈಫಲ್ಯಕ್ಕೆ ಹಿಡಿದಿರುವ ಕನ್ನಡಿಯಾಗಿದೆ. ಸಾವಿರಾರು ಉದ್ಯೋಗಾಕಾಂಕ್ಷಿಗಳು ನಡೆಸಿದ ಪ್ರತಿಭಟನೆ, ಈ ಹೊತ್ತಿನ ಬಹು ಮುಖ್ಯ ಸಮಸ್ಯೆಯೊಂದರ ಬಗ್ಗೆ ಯುವಜನ ಜಾಗೃತಗೊಂಡಿರುವುದರ ಸಂಕೇತವಾಗಿದೆ. ಅದು ಏಕಾಏಕಿ ರೂಪುಗೊಂಡ ವಿದ್ಯಮಾನವಾಗಿರದೆ, ಕಳೆದ ಆರು ತಿಂಗಳಿನಿಂದಲೂ ಹೊಗೆಯಾಡುತ್ತಿದ್ದ ಅಸಮಾಧಾನದ ವ್ಯಕ್ತರೂಪವಾಗಿದೆ. ಖಾಲಿ ಹುದ್ದೆಗಳನ್ನು ತುಂಬುವಂತೆ ಒತ್ತಾಯಿಸಿ ವಿದ್ಯಾರ್ಥಿಗಳು, ಯುವಜನರು ಕಳೆದ ಸೆಪ್ಟೆಂಬರ್, ಅಕ್ಟೋಬರ್‌ನಲ್ಲಿಯೂ ಪ್ರತಿಭಟನೆ ನಡೆಸಿದ್ದರು. ಆ ಪ್ರತಿಭಟನೆಯ ಸೊಲ್ಲು ಈಗ ಮತ್ತಷ್ಟು ಬಲವಾಗಿದೆ. 50 ಸಾವಿರ ಹುದ್ದೆಗಳ ನೇಮಕಾತಿಗೆ ಹಣಕಾಸು ಇಲಾಖೆ ಅನುಮೋದನೆ ನೀಡಿದ್ದು, ಸರ್ಕಾರ ಅಧಿಸೂಚನೆ ಹೊರಡಿಸದಿದ್ದರೆ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳುತ್ತೇವೆ ಎಂದು 'ಅಕ್ಕಾ' ಅಧ್ಯಕ್ಷ ಕಾಂತಕುಮಾರ್ ಹೇಳಿದ್ದಾರೆ.

**ಇಂಥ ಅಸೂಕ್ಷ್ಮ ನಡವಳಿಕೆ ಸರ್ಕಾರಕ್ಕೆ ಶೋಭೆ ತರುವಂತಹದ್ದಲ್ಲ. ಪ್ರತಿಭಟನಾಕಾರರ ಭಾವನೆಗಳಿಗೆ ಸರ್ಕಾರ ಸಹಾನುಭೂತಿಯಿಂದ ಸ್ಪಂದಿಸಬೇಕು. ನೇಮಕಾತಿ ಪ್ರಕ್ರಿಯೆ ಮುಂದೆ ಹೋದಷ್ಟೂ ಉದ್ಯೋಗಾಕಾಂಕ್ಷಿಗಳ ಹತಾಶೆ ಹೆಚ್ಚುತ್ತದೆ.**

'ಭ್ರಷ್ಟಾಚಾರ ಮುಕ್ತವಾಗಿ ನೇಮಕಾತಿ ನಡೆಸಿ', 'ಯುವಜನರಿಗೆ ಕೆಲಸ ಕೊಡಿ' ಎನ್ನುವ ಉದ್ಯೋಗಾಕಾಂಕ್ಷಿಗಳ ಬೇಡಿಕೆ ಮತ್ತಷ್ಟು ದೊಡ್ಡದಾಗುವ ಮುನ್ನ ಸರ್ಕಾರ ಎಚ್ಚರಗೊಳ್ಳಬೇಕಾಗಿದೆ.

ನಾಡಿನ ಎಲ್ಲ ಭಾಗಗಳ ನಿರುದ್ಯೋಗಿ ಯುವಜನರ ಸಂಕಟ ಹಾಗೂ ಹತಾಶೆಯ ರೂಪದಲ್ಲಿ ನೋಡಬಹುದಾದ ಪ್ರತಿಭಟನೆಯನ್ನು ಸರ್ಕಾರ ಇನ್ನಾದರೂ ಗಂಭೀರವಾಗಿ ಪರಿಗಣಿಸಬೇಕಾಗಿದೆ.

ಶಾಲಾ ಶಿಕ್ಷಣ ಇಲಾಖೆಯಲ್ಲಿನ 79,694 ಹುದ್ದೆಗಳು ಸೇರಿದಂತೆ ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿರುವ ಒಟ್ಟು 2,84,881 ಹುದ್ದೆಗಳನ್ನು ಸರ್ಕಾರ ತುಂಬಬೇಕಾಗಿದೆ. ಈ ಹುದ್ದೆಗಳನ್ನು ವರ್ಷಗಟ್ಟಲೆ ತುಂಬದೆ ಉಳಿಸಿಕೊಂಡಿರುವ ಸರ್ಕಾರದ ಧೋರಣೆಯು ಯುವಜನರನ್ನು ಉದ್ಯೋಗದ ಹಕ್ಕಿನಿಂದ ವಂಚಿಸಿದೆ ಹಾಗೂ ಆಡಳಿತಯಂತ್ರ ದುರ್ಬಲಗೊಳ್ಳಲು ಕಾರಣವಾಗಿದೆ. ವಿವಿಧ ಇಲಾಖೆಗಳಲ್ಲಿ ಖಾಲಿ ಉಳಿದಿರುವ ಹುದ್ದೆಗಳ ಆಧಾರದಲ್ಲಿ, ಆ ಇಲಾಖೆ ಎಷ್ಟರಮಟ್ಟಿಗೆ ದುರ್ಬಲಗೊಂಡಿರಬಹುದು ಎನ್ನುವುದನ್ನು ಊಹಿಸಬಹುದಾಗಿದೆ. ವೆಚ್ಚವನ್ನು ತಗ್ಗಿಸಿಕೊಳ್ಳುವ ಉದ್ದೇಶದಿಂದ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಹುದ್ದೆಗಳ ಸಂಖ್ಯೆಯನ್ನು ಕಡಿಮೆ ಮಾಡಿದೆ ಹಾಗೂ ಖಾಲಿ ಇರುವ ಹುದ್ದೆಗಳನ್ನು ತುಂಬಲು ಉತ್ಸುಕವಾಗಿಲ್ಲ. 'ಗ್ಯಾರಂಟಿ ಯೋಜನೆ'ಗಳ ಮೂಲಕ ನಾಡಿನ ಜನರ ಬದುಕಿನಲ್ಲಿ ಬದಲಾವಣೆ ತಂದಿರುವುದಾಗಿ ಬಿಂಬಿಸಿಕೊಳ್ಳುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ತನ್ನನ್ನು 'ಗ್ಯಾರಂಟಿ ಸರ್ಕಾರ' ಎಂದೂ ಕರೆದುಕೊಳ್ಳುತ್ತಿದೆ. ಸರ್ಕಾರದ ಗ್ಯಾರಂಟಿಗಳಲ್ಲಿ ನಿರುದ್ಯೋಗ ಭತ್ಯೆ ನೀಡುವ 'ಯುವನಿಧಿ'ಯೂ ಒಂದಾಗಿದೆ. ಆದರೆ, ಗ್ಯಾರಂಟಿ ಯೋಜನೆಗಳ ಬದಲಾವಣೆ ದೀರ್ಘವಾದುದಲ್ಲ ಹಾಗೂ ಆ ಯೋಜನೆಗಳು ಶಾಶ್ವತ ಫಲಿತಾಂಶವನ್ನೂ ನೀಡಲಾರವು. ಬದಲಾವಣೆ ಶಾಶ್ವತವಾಗಿ ಉಳಿಯಬೇಕಾದರೆ ಯುವಜನರಿಗೆ ಉದ್ಯೋಗ ನೀಡುವುದು ಅಗತ್ಯ ಎನ್ನುವುದನ್ನು ಸರ್ಕಾರ ಮರೆಯಬಾರದು.

ಒಂದು ಉದ್ಯೋಗ ಇಡೀ ಕುಟುಂಬದ ದಿಕ್ಕುದೆಸೆ ಬದಲಿಸುವ ಸಾಮರ್ಥ್ಯ ಹೊಂದಿರುತ್ತದೆ. ಉದ್ಯೋಗಾಕಾಂಕ್ಷಿಗಳ ಪ್ರತಿಭಟನೆಯನ್ನು ಪೊಲೀಸರ ಮೂಲಕ ಹತ್ತಿಕ್ಕುವ ಪ್ರಯತ್ನವೂ ನಡೆದಂತಿದೆ. ಇಂಥ ಅಸೂಕ್ಷ್ಮ ನಡವಳಿಕೆ ಸರ್ಕಾರಕ್ಕೆ ಶೋಭೆ ತರುವಂತಹದ್ದಲ್ಲ. ಪ್ರತಿಭಟನಾಕಾರರ ಭಾವನೆಗಳಿಗೆ ಸರ್ಕಾರ ಸಹಾನುಭೂತಿಯಿಂದ ಸ್ಪಂದಿಸಬೇಕು. ನೇಮಕಾತಿ ಪ್ರಕ್ರಿಯೆ ಮುಂದೆ ಹೋದಷ್ಟೂ ಉದ್ಯೋಗಾಕಾಂಕ್ಷಿಗಳ ಹತಾಶೆ ಹೆಚ್ಚುತ್ತದೆ. ಅವರನ್ನು ನೆಚ್ಚಿಕೊಂಡ ಕುಟುಂಬಗಳ ಸಂಕಷ್ಟವೂ ಮುಂದುವರಿಯುತ್ತದೆ. ನಿರುದ್ಯೋಗ ಸಮಸ್ಯೆ ಉಲ್ಬಣಗೊಳ್ಳಲು ರಾಜಕೀಯ ಪಕ್ಷಗಳು ನೇರ ಹೊಣೆಯಾಗಿವೆ. ಖಾಲಿ ಹುದ್ದೆಗಳನ್ನು ತುಂಬುವುದು ಹಾಗೂ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು ಯಾವ ಪಕ್ಷಕ್ಕೂ ಆದ್ಯತೆಯ ವಿಷಯವಾಗಿಲ್ಲ. ರಾಜ್ಯದಲ್ಲಿ ಲಕ್ಷಾಂತರ ಸರ್ಕಾರಿ ಹುದ್ದೆಗಳು ಭರ್ತಿ ಆಗದಿರುವುದರಲ್ಲಿ ಆಡಳಿತ ಪಕ್ಷದಷ್ಟೇ ವಿರೋಧಪಕ್ಷದ ಹೊಣೆಗಾರಿಕೆಯೂ ಇದೆ. ನೇಮಕಾತಿಗಳು ನನೆಗುದಿಗೆ ಬಿದ್ದಿರುವುದಕ್ಕೆ ಸಿದ್ದರಾಮಯ್ಯ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವ ರಾಜ್ಯ ಬಿಜೆಪಿ, ಅದೇ ಪ್ರಶ್ನೆಯನ್ನು ಕೇಂದ್ರ ಸರ್ಕಾರಕ್ಕೆ ಕೇಳುವುದಿಲ್ಲ. ಯುವಜನರನ್ನು ಓಟ್ ಬ್ಯಾಂಕ್ ರೂಪದಲ್ಲಷ್ಟೇ ನೋಡುವ ರಾಜಕೀಯ ಪಕ್ಷಗಳು, ನಿರುದ್ಯೋಗದ ಸಮಸ್ಯೆಯನ್ನು ಮರೆಮಾಚಲಿಕ್ಕಾಗಿ ಯುವಜನರನ್ನು ದಾರಿತಪ್ಪಿಸಲು ಪ್ರಯತ್ನಿಸಿವೆ. ನಿರುದ್ಯೋಗ ಸಮಸ್ಯೆ ಆರ್ಥಿಕ ಸಮಸ್ಯೆಯಾಗಿಯಷ್ಟೇ ಉಳಿಯದೆ ಸಾಮಾಜಿಕ ಬಿಕ್ಕಟ್ಟಾಗಿಯೂ ಪರಿಣಮಿಸಿರುವ ಸಂದರ್ಭದಲ್ಲಿ, ವಿಭಜಕ ರಾಜಕಾರಣಕ್ಕಿಂತಲೂ ಜೀವನ ನಿರ್ವಹಣೆಗೆ ಉದ್ಯೋಗ ಅಗತ್ಯ ಎನ್ನುವ ಅರಿವು ಜಾಗೃತಗೊಂಡಿರುವ ರೂಪದಲ್ಲೂ ಧಾರವಾಡದಲ್ಲಿ ನಡೆದ ಬೃಹತ್ ಪ್ರತಿಭಟನೆಯನ್ನು ನೋಡಬಹುದಾಗಿದೆ. ಒಳಮೀಸಲಾತಿ ಕಾರಣದಿಂದಾಗಿ ನೇಮಕಾತಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕಾಯಿತು: ಖಾಲಿ ಇರುವ ಹುದ್ದೆಗಳನ್ನು ಕಾಲಮಿತಿಯೊಳಗೆ ಪಾರದರ್ಶಕವಾಗಿ ತುಂಬಲಾಗುವುದು ಎಂದು ಮುಖ್ಯಮಂತ್ರಿ ಹೇಳಿದ್ದಾರೆ.

# ಹೆರಿಗೆಯ ನಂತರ ತೂಕ ಇಳಿಕೆಗೆ ಸಲಹೆ



ಗರ್ಭಾವಸ್ಥೆಯಲ್ಲಿ ಪ್ರತಿ ಮಹಿಳೆಯರೂ ತೂಕವನ್ನು ಹೆಚ್ಚಿಸಿಕೊಳ್ಳುತ್ತಾರೆ. ಹೆಚ್ಚುವರಿ ತೂಕ ಹೆಚ್ಚಾಗುವುದು ಹೆಚ್ಚು ಕೊಬ್ಬಿಗೆ ಕಾರಣವಾಗಬಹುದು. ಇದನ್ನು ಜನರು ಸಾಮಾನ್ಯವಾಗಿ ಮಗುವಿನ ತೂಕ ಎಂದು ಕರೆಯುತ್ತಾರೆ ಮತ್ತು ಇದು ತುಂಬಾ ಸಾಮಾನ್ಯವಾಗಿದೆ. ಎಲ್ಲಾ ಗರ್ಭಿಣಿ ಮಹಿಳೆಯರಲ್ಲಿ ಅರ್ಧದಷ್ಟು ಜನರು ಗರ್ಭಾವಸ್ಥೆಯಲ್ಲಿ ಶಿಫಾರಸು ಮಾಡಿದ ಪ್ರಮಾಣಕ್ಕಿಂತ ಹೆಚ್ಚು ತೂಕವನ್ನು ಪಡೆಯುತ್ತಾರೆ.

ನೀವು ಹೆರಿಗೆಯ ನಂತರ ಮತ್ತೆ ಹಳೆಯ ಆಕಾರ ಪಡೆಯುವುದು ಮತ್ತು ಮಗುವಿನ ಹೆಚ್ಚುವರಿ ತೂಕವನ್ನು ಹೇಗೆ ಕಳೆದುಕೊಳ್ಳುವುದು ಎಂಬುದರ ಬಗ್ಗೆ ಯೋಚಿಸುತ್ತಿರಬಹುದು. ನೀವು ತಿಳಿದುಕೊಳ್ಳಬೇಕಾದ ಮೊದಲ ವಿಷಯವೆಂದರೆ ಮಗುವನ್ನು ಹೆತ್ತ ನಂತರ ತೂಕ ಇಳಿಸಿಕೊಳ್ಳುವ ವಿಷಯದಲ್ಲಿ ಸಾಮಾನ್ಯ ಎಂಬುದಿಲ್ಲ. ಪ್ರತಿಯೊಬ್ಬರೂ ವಿಭಿನ್ನರು, ಮತ್ತು ನೀವು ಹೇಗೆ ಹೆರಿಗೆ ಮಾಡಿದ್ದೀರಿ ಮತ್ತು ನಿಮ್ಮ ದೇಹವು ಎಷ್ಟು ಬೇಗನೆ ಗುಣಮುಖವಾಗುತ್ತಿದೆ ಎಂಬಂತಹ ಪ್ರಸವಾನಂತರದ ತೂಕ ನಷ್ಟಕ್ಕೆ ಕಾರಣವಾಗುವ ಹಲವಾರು ಅಂಶಗಳಿವೆ ಎನ್ನುತ್ತಾರೆ ಅಂಕುರ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ. ಸುನೀತಾ. ಹೆರಿಗೆಯ ನಂತರ 6 ರಿಂದ 12 ತಿಂಗಳೊಳಗೆ ನಿಮ್ಮ ಗರ್ಭಧಾರಣೆಯ ಪೂರ್ವದ ತೂಕಕ್ಕೆ ಮರಳಲು ನೀವು ಯೋಜಿಸಬೇಕು. ಹೆಚ್ಚಿನ ಮಹಿಳೆಯರು ಹೆರಿಗೆಯ ನಂತರ 6 ವಾರಗಳೊಳಗೆ (ಪ್ರಸವಾನಂತರದ) ತಮ್ಮ ಮಗುವಿನ ತೂಕದ ಅರ್ಧದಷ್ಟು ಕಳೆದುಕೊಳ್ಳುತ್ತಾರೆ. ಉಳಿದವು ಮುಂದಿನ ಕೆಲವು ತಿಂಗಳುಗಳಲ್ಲಿ ಹೆಚ್ಚಾಗಿ ಕಡಿಮೆಯಾಗುತ್ತದೆ. ದೈನಂದಿನ ವ್ಯಾಯಾಮದೊಂದಿಗೆ ಆರೋಗ್ಯಕರ ಆಹಾರವು ನಿಮ್ಮ ತೂಕ ಇಳಿಸಿಕೊಳ್ಳಲು ಸಹಾಯ ಮಾಡುತ್ತದೆ. ಸ್ತನ್ಯಪಾನವು ಪ್ರಸವಾನಂತರದ ತೂಕ ನಷ್ಟಕ್ಕೂ ಸಹಾಯ ಮಾಡುತ್ತದೆ.

## ಪ್ರಸವಾನಂತರದ ತೂಕ ನಷ್ಟಕ್ಕೆ ನಿದ್ರೆ ಹೇಗೆ ಸಹಾಯ ಮಾಡುತ್ತದೆ

**ನಿದ್ರೆಯ ಅಭಾವವು ಹಸಿವು ಮತ್ತು ಚಯಾಪಚಯವನ್ನು ನಿಯಂತ್ರಿಸುವ ಹಾರ್ಮೋನುಗಳನ್ನು ಅಡ್ಡಿಪಡಿಸುತ್ತದೆ, ವಿಶೇಷವಾಗಿ ಗ್ರೆಲಿನ್ (ಹಸಿವಿನ ಹಾರ್ಮೋನ್) ಅನ್ನು ಹೆಚ್ಚಿಸುತ್ತದೆ ಮತ್ತು ಲೆಪ್ಟಿನ್ (ಅತ್ಯಧಿಕ ಹಾರ್ಮೋನ್) ಅನ್ನು ಕಡಿಮೆ ಮಾಡುತ್ತದೆ. ಇದು ಹೆಚ್ಚಿದ ಕಡುಬಯಕೆಗಳು, ಆಯಾಸ ಮತ್ತು ದೈಹಿಕ ಚಟುವಟಿಕೆಯನ್ನು ಕಡಿಮೆ ಮಾಡುತ್ತದೆ. ಕಳಪೆ ನಿದ್ರೆ ಕಾರ್ಟಿಸೋಲ್ ಅನ್ನು ಸಹ ಹೆಚ್ಚಿಸುತ್ತದೆ, ಇದು ಕೊಬ್ಬಿನ ಶೇಖರಣೆಯನ್ನು ಉತ್ತೇಜಿಸುತ್ತದೆ, ವಿಶೇಷವಾಗಿ ಹೊಟ್ಟೆಯ ಸುತ್ತಲೂ. ಮಗು ನಿದ್ದೆ ಮಾಡುವಾಗ ವಿಘಟಿತ ವಿಶ್ರಾಂತಿ ಮತ್ತು ನಿದ್ರೆ ಕೂಡ ಚಯಾಪಚಯ ಸಮತೋಲನ ಮತ್ತು ಚೇತರಿಕೆಯನ್ನು ಬೆಂಬಲಿಸುತ್ತದೆ.**

### ಪ್ರಸವಾನಂತರದ ತೂಕ ನಷ್ಟದಲ್ಲಿ ಸ್ತನ್ಯಪಾನ

ಹಾಲು ಉತ್ಪಾದನೆಯು ದೈನಂದಿನ ಶಕ್ತಿಯ ವೆಚ್ಚವನ್ನು ಹೆಚ್ಚಿಸುವುದರಿಂದ ಸ್ತನ್ಯಪಾನವು ಕ್ರಮೇಣ ಪ್ರಸವಾನಂತರದ ತೂಕ ನಷ್ಟವನ್ನು ಬೆಂಬಲಿಸುತ್ತದೆ. ಸರಾಸರಿ, ಹಾಲುಣಿಸುವ ತಾಯಂದಿರು ದಿನಕ್ಕೆ ಹೆಚ್ಚುವರಿಯಾಗಿ 400–500 ಕೆ.ಕೆ.ಎಲ್ ಅನ್ನು ಸುಡಬಹುದು. ಇದು ಆಕ್ಸಿಟೋಸಿನ್ ಬಿಡುಗಡೆಯ ಮೂಲಕ ಗರ್ಭಾಶಯದ ಸಂಕೋಚನವನ್ನು ಉತ್ತೇಜಿಸುತ್ತದೆ, ಚೇತರಿಕೆಗೆ ಸಹಾಯ ಮಾಡುತ್ತದೆ. ಆದಾಗ್ಯೂ, ತೂಕ ನಷ್ಟವು ವ್ಯಾಪಕವಾಗಿ ಬದಲಾಗುತ್ತದೆ ಮತ್ತು ಕ್ಯಾಲೋರಿ ನಿರ್ಬಂಧದ ಮೂಲಕ ಒತ್ತಾಯಿಸಬಾರದು, ಏಕೆಂದರೆ ಹಾಲು ಪೂರೈಕೆ ಮತ್ತು ತಾಯಿಯ ಆರೋಗ್ಯಕ್ಕೆ ಸಾಕಷ್ಟು ಪೋಷಣೆ ಮತ್ತು ಜಲಸಂಚಯನ ಅತ್ಯಗತ್ಯ.

ಸ್ತನ್ಯಪಾನವು ತಾಯಿಯ ಚಯಾಪಚಯ, ಇನ್ಸುಲಿನ್ ಸಂವೇದನೆ, ಹಾಲು ಉತ್ಪಾದನೆಯಲ್ಲಿ ಬಳಸುವ ಕೊಬ್ಬಿನ ಹೆಚ್ಚಿದ ಬಿಡುಗಡೆ ಮತ್ತು ತ್ವರಿತ ಪ್ರಸವಾನಂತರದ ತೂಕ ನಷ್ಟದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ಇದು ಸ್ತನ್ಯಪಾನ ಮಾಡುವ ತಾಯಿಯನ್ನು ಬೊಜ್ಜು ಮತ್ತು ಚಯಾಪಚಯ ಕಾಯಿಲೆಗಳಿಂದ ರಕ್ಷಿಸುತ್ತದೆ ಎನ್ನುತ್ತಾರೆ.

### ಆಹಾರ ಮತ್ತು ವ್ಯಾಯಾಮ

ಪ್ರೋಟೀನ್, ಧಾನ್ಯಗಳು, ಹಣ್ಣುಗಳು, ತರಕಾರಿಗಳು, ಆರೋಗ್ಯಕರ ಕೊಬ್ಬುಗಳು, ಕ್ಯಾಲ್ಸಿಯಂ ಮತ್ತು ಕಬ್ಬಿಣದಿಂದ ಸಮೃದ್ಧವಾಗಿರುವ ಆಹಾರಗಳು ಗುಣಪಡಿಸುವಿಕೆ ಮತ್ತು ಶಕ್ತಿಯ ಮಟ್ಟವನ್ನು ಬೆಂಬಲಿಸುತ್ತವೆ. ವಾಕಿಂಗ್, ಶ್ರೋಣಿಯ ಮಹಡಿ ವ್ಯಾಯಾಮಗಳು ಮತ್ತು ಪ್ರಸವಪೂರ್ವ ಯೋಗದಂತಹ ಸೌಮ್ಯ ದೈಹಿಕ ಚಟುವಟಿಕೆಗಳು ಸಾಮಾನ್ಯವಾಗಿ ವೈದ್ಯಕೀಯ ಅನುಮತಿಯ ನಂತರ ಪ್ರಾರಂಭವಾಗಬಹುದು. ಗರ್ಭಧಾರಣೆ ಮತ್ತು ಹೆರಿಗೆಯಿಂದ ಸುರಕ್ಷಿತವಾಗಿ ಚೇತರಿಸಿಕೊಳ್ಳಲು ದೇಹವು ಸಮಯ ತೆಗೆದುಕೊಳ್ಳುವುದರಿಂದ ಕ್ರಮೇಣ ಪ್ರಗತಿ ಮುಖ್ಯವಾಗಿದೆ.

# ಕುಟುಂಬದೊಳಗಿನ ಸಂವಹನ ಕಡಿಮೆಯಾಗುತ್ತಿರುವುದೇಕೆ?



ವಿಶ್ವಾಸ್.ಡಿ.ಗೌಡ

**ಒಂದು ಕಾಲದಲ್ಲಿ ಮನೆ ಎಂದರೆ ಮಾತುಕತೆಗಳ ಮಂಟಪವಾಗಿತ್ತು. ಊಟದ ಮೇಜಿನ ಬಳಿ ದಿನವಿಡೀ ನಡೆದ ಘಟನೆಗಳು ಹಂಚಿಕೊಳ್ಳಲಾಗುತ್ತಿತ್ತು. ಹಿರಿಯರ ಅನುಭವ, ಮಕ್ಕಳ ಕುತೂಹಲ, ಅಮ್ಮನ ಮಮತೆ, ಅಪ್ಪನ ಮಾರ್ಗದರ್ಶನ ಇವೆಲ್ಲವೂ ಸಂಭಾಷಣೆಯ ಮೂಲಕ ಬೆಸೆಯಲ್ಪಡುತ್ತಿತ್ತು. ಆದರೆ ಇಂದಿನ ಮನೆಗಳಲ್ಲಿ ದೃಶ್ಯ ಬದಲಾಗಿದೆ. ಒಂದೇ ಮನೆಯಲ್ಲಿ ನಾಲ್ಕು ಜನ ಇದ್ದರೂ, ನಾಲ್ಕು ಮೊಬೈಲ್‌ಗಳ ನಡುವೆ ಮೌನ ಆವರಿಸಿದೆ.**

ತಂತ್ರಜ್ಞಾನ ಜೀವನವನ್ನು ಸುಲಭಗೊಳಿಸಿದೆ. ಆದರೆ ಅದೇ ತಂತ್ರಜ್ಞಾನ ಸಂಬಂಧಗಳ ನಡುವೆ ಗೋಡೆಯನ್ನೂ ನಿರ್ಮಿಸಿದೆ. ಬೆಳಿಗ್ಗೆ ಎದ್ದ ಕ್ಷಣದಿಂದ ರಾತ್ರಿ ಮಲಗುವವರೆಗೂ ಮೊಬೈಲ್ ಕೈಯಲ್ಲೇ ಇರುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ನೂರಾರು ಜನರೊಂದಿಗೆ ಸಂಪರ್ಕದಲ್ಲಿದ್ದರೂ, ಮನೆಯೊಳಗಿನ ವ್ಯಕ್ತಿಗಳೊಂದಿಗೆ ಸಂಭಾಷಣೆ ಕಡಿಮೆಯಾಗಿದೆ. ಪ್ರಶ್ನೆ ಕೇಳಬೇಕಾಗಿದೆ ನಾವು ಒಂದೇ ಮನೆಯವರಾ ಅಥವಾ ಒಂದೇ WiFi ಬಳಕೆದಾರರಾಗಿ.

ಮಾತುಕತೆಗಳ ಕೊರತೆ ನಿಧಾನವಾಗಿ ಭಾವನಾತ್ಮಕ ದೂರವನ್ನು ಹೆಚ್ಚಿಸುತ್ತದೆ. ತಾಯಿ–ತಂದೆಯರು ಮಕ್ಕಳೊಂದಿಗೆ ಮಾತನಾಡಲು ಸಮಯ ಕೊಡದಾಗ, ಮಕ್ಕಳು ತಮ್ಮ ಸಮಸ್ಯೆಗಳನ್ನು ಒಳಗೇ ಇಟ್ಟುಕೊಳ್ಳುತ್ತಾರೆ. ಪತಿ–ಪತ್ನಿಯರು ಪರಸ್ಪರ ಮಾತನಾಡದೆ ದಿನಗಳನ್ನು ಕಳೆಯುವ ಪರಿಸ್ಥಿತಿ ಉಂಟಾಗುತ್ತದೆ. ಹಿರಿಯರು ಮನೆಯಲ್ಲಿದ್ದರೂ, ಅವರ ಮಾತು ಕೇಳುವವರು ಕಡಿಮೆಯಾಗುತ್ತಾರೆ. ಹೀಗಾಗಿ ಮನೆಯಲ್ಲಿ ಜನ ಇದ್ದರೂ, ಮನಸ್ಸುಗಳು ಬೇರೆಬೇರೆ ದ್ವೀಪಗಳಂತೆ ಆಗುತ್ತವೆ.

ಸಂವಹನ ಎಂದರೆ ಕೇವಲ ಮಾತಾಡುವುದು ಅಲ್ಲ; ಅದು ಕೇಳುವುದೂ ಹೌದು. ಇಂದಿನ ವೇಗದ ಜೀವನದಲ್ಲಿ ''ನಾನು ಬ್ಯುಸಿ'' ಎಂಬ ಕಾರಣದಿಂದ ನಾವು ಕೇಳುವ ಕಿವಿಯನ್ನು ಕಳೆದುಕೊಂಡಿದ್ದೇವೆ. ಮಕ್ಕಳ ಯಶಸ್ಸು ಕೇಳುತ್ತೇವೆ, ಆದರೆ ಅವರ ಭಯ ಕೇಳುವುದಿಲ್ಲ. ಜೀವನದ ಗುರಿ ಕೇಳುತ್ತೇವೆ, ಆದರೆ ಅವರ ಕನಸು ಕೇಳುವುದಿಲ್ಲ.

ಈ ಕೊರತೆ ಮುಂದಿನ ದಿನಗಳಲ್ಲಿ ಸಂಬಂಧಗಳ ದುರ್ಬಲತೆಯನ್ನು ಉಂಟುಮಾಡುತ್ತದೆ.

ಮೊಬೈಲ್ ಒಂದು ಸಾಧನ ಮಾತ್ರ. ಆದರೆ ಅದು ಸಂಬಂಧಗಳ ಬದಲಿಗೆ ಸ್ಥಾನ ಪಡೆದಾಗ ಸಮಸ್ಯೆ ಆರಂಭವಾಗುತ್ತದೆ. ಕುಟುಂಬದ ಸದಸ್ಯರು ಒಂದೇ ಕೊಠಡಿಯಲ್ಲಿ ಕೂತಿದ್ದರೂ, ಪ್ರತಿಯೊಬ್ಬರೂ ತಮ್ಮದೇ ಪರದೆಯೊಳಗೆ ಮುಳುಗಿರುವುದು ಸಾಮಾನ್ಯ ದೃಶ್ಯ.

ಒಟ್ಟಿಗೆ ಊಟ ಮಾಡುವ ಸಂಪ್ರದಾಯವೂ ಕಡಿಮೆಯಾಗುತ್ತಿದೆ. ಹೀಗಾಗಿ ಅನುಭವ ಹಂಚಿಕೊಳ್ಳುವ ಅವಕಾಶಗಳು ಕುಗ್ಗುತ್ತಿವೆ.

ಇದಕ್ಕೆ ಪರಿಹಾರ ಅಸಾಧ್ಯವಲ್ಲ. ದಿನಕ್ಕೆ ಕನಿಷ್ಠ ಕೆಲವು ಕ್ಷಣಗಳು ''ಮೊಬೈಲ್ ರಹಿತ ಸಮಯ''ವನ್ನು ಕುಟುಂಬದವರು ನಿರ್ಧರಿಸಬಹುದು.

ಒಟ್ಟಿಗೆ ಊಟ ಮಾಡುವುದು, ವಾರಕ್ಕೊಮ್ಮೆ ಕುಟುಂಬ ಚರ್ಚೆ ನಡೆಸುವುದು, ಹಿರಿಯರ ಕಥೆಗಳನ್ನು ಕೇಳುವುದು ಇವು ಸಣ್ಣ ಕ್ರಮಗಳು. ಆದರೆ ಇವು ಸಂಬಂಧಗಳನ್ನು ಗಟ್ಟಿ ಮಾಡುತ್ತವೆ.


ಕುಟುಂಬವೆಂದರೆ ಕೇವಲ ಒಂದೇ ಮನೆ ಹಂಚಿಕೊಳ್ಳುವುದು ಅಲ್ಲ; ಅದು ಭಾವನೆಗಳನ್ನು ಹಂಚಿಕೊಳ್ಳುವುದು. ಸಂವಹನವೇ ಕುಟುಂಬದ ಹೃದಯಧ್ವನಿ. ಅದು ನಿಂತರೆ ಸಂಬಂಧಗಳು ಬತ್ತುತ್ತವೆ.

ಅಂತಿಮವಾಗಿ ನಮ್ಮನ್ನು ನಾವು ಕೇಳಿಕೊಳ್ಳೋಣ ನಾವು ಒಂದೇ ಮನೆಯವರಾಗಿ ಬದುಕುತ್ತಿದ್ದೇವಾ ಅಥವಾ ಒಂದೇ WiFi ಬಳಕೆದಾರರಾಗಿ.

ಉತ್ತರ ನಮ್ಮ ಕೈಯಲ್ಲಿದೆ. ಮೊಬೈಲ್‌ಗಳನ್ನು ಸ್ವಲ್ಪ ದೂರ ಇಟ್ಟು, ಮನಸ್ಸುಗಳನ್ನು ಹತ್ತಿರ ತರೋಣ. ಅದೇ ಸತ್ಯವಾದ ಕುಟುಂಬದ ಶಕ್ತಿ.




## ದಿನಕ್ಕೊಂದು ಮುಕ್ತಕ: 104



ಸಾಮಾಜಿಕ ಕಳಕಳಿ

ಹೆಚ್.ಎಸ್. ಪ್ರತಿಮಾ
ಲೇಖಕರು
ಸಾಮಾಜಿಕ ಚಿಂತಕಿ ಹಾಗೂ
ಶಿಕ್ಷಕಿ, ಹಾಸನ



*ಮಕ್ಕಳದು ಆಡುತಿರೆ ಚೆಂದವದು ನೋಡಲಿಕೆ*
*ಸಿಕ್ಕದನು ನೋಡುತಲಿ ಮುಟ್ಟುತಿರಲು*
*ಪಕ್ಕದಲಿ ಸ್ನೇಹಿತರು ಜೊತೆಗಿರಲು ಓದುತಿರಲು*
*ಚುಕ್ಕಿಯನು ಬಿಡಿಸುತಲಿ ಲಕ್ಷ್ಮಿ ದೇವಿ...*

**ಭಾವಾರ್ಥ:** ಮಕ್ಕಳಲ್ಲಿ ಬಹಳಷ್ಟು ಚೆಂದದ, ಅಂದದ, ಮೊಂಡುತನದ ಹಲವಾರು ಭಾವನೆಗಳನ್ನು ಒಳಗೊಂಡಿರುತ್ತವೆ. ತುಂಟತನದಲ್ಲಿ ಸಿಕ್ಕಿದ್ದನ್ನೆಲ್ಲ ನೋಡುವುದು, ಮುಟ್ಟುವುದು ಅವರಿಗೆ ಕುತೂಹಲಕಾರಿಯಾಗುತ್ತದೆ. ಓದಬೇಕಾದರಂತೂ ಸ್ನೇಹಿತರು ಪಕ್ಕದಲ್ಲಿದ್ದರೆ ಸಾಕು ಚಿಕ್ಕ ಪುಟ್ಟ ತುಂಟಾಟತನಗಳನ್ನು ಮಾಡುತ್ತಲೇ ಸಾಗುತ್ತಾರೆ. ಚುಕ್ಕಿ ರಂಗೋಲಿಗಳನ್ನು ಬಿಡಿಸುತ್ತಾ ಗುರುಗಳಿಗೆ ತಿಳಿಯದಂತೆ ತುಂಟಾಟಗಳನ್ನು ಮಾಡುತ್ತಾ ವಿದ್ಯಾರ್ಥಿಯಲ್ಲಿ ತೊಡಗುತ್ತಾರೆ. ಅದು ಸಹ ಆ ಮಕ್ಕಳು ಚುರುಕುತನ ವಿದ್ದಾರೆ ಎಂಬುದನ್ನು ತಿಳಿಸುವ ಒಂದು ಪ್ರಮಾಣ ಪತ್ರವೇ ಎನ್ನಬಹುದು. ಒಟ್ಟಾರೆ ಶಾಲೆಯಲ್ಲಿ ವಿದ್ಯಾರ್ಥಿಗಳ ತುಂಟಾಟವು ಸಹ ಬೇಕಾಗುತ್ತದೆ. ಜೀವನ ಅನ್ನೋದು ಒಂದು ಹಂತದಲ್ಲಿ ವಿಮರ್ಶೆಗಳಲ್ಲಿ ಕಾಯುತ್ತೇವೆ. ತಾರ್ಕವಾಗಿ ಸಮರಗಳನ್ನು ಮಾಡುತ್ತ ಸಾಗುತ್ತಲೇ ಇರಬೇಕಾಗುತ್ತದೆ. ಅಂತಹ ಬದುಕಿನಲ್ಲಿ ಮಕ್ಕಳ ಪಾತ್ರವೂ ಬಹಳ ಮುಖ್ಯವಾಗಿರುತ್ತದೆ. ಆ ಮಕ್ಕಳ ಬೆಳವಣಿಗೆಯಲ್ಲಿ ಶಾಲೆಯು ತಿದ್ದಿ ತೀಡುವ ಶಿಲ್ಪಿಯಾದ ಗುರುಗಳೊಂದಿಗೆ ಕಲ್ಲಿನಂತೆ ಸಿಗುವ ವಿದ್ಯಾರ್ಥಿಗಳು ಹುಳಿ ಬೆಟ್ಟ ನೋವು ಪಡೆಯುವ ರೀತಿಯಲ್ಲಿ ಜ್ಞಾನಾರ್ಜನೆಯನ್ನು ಪಡೆಯಬೇಕಾಗುತ್ತದೆ. ಆಗ ಮಾತ್ರ ನಿಜವಾಗಿಯೂ ಆ ವಿದ್ಯಾರ್ಥಿಯು ಉತ್ತಮ ಶಿಲೆಯಾಗಿ ಹೊರಹೊಮ್ಮುತ್ತಾನೆ. ಮಕ್ಕಳು ಆಡುತ್ತಿರುವಾಗ ಬಹಳಷ್ಟು ಚೆಂದವಾಗಿ ಇರುತ್ತದೆ.

# ರಾಮಾಯಣ



ತಾರೆಯು ಲಕ್ಷ್ಮಣನಿಗೆ ಹೇಳಿದ ಸಮಾಧಾನ

• ಹಿಂದಿನ ಸಂಚಿಕೆಯಿಂದ

## 121 ನೆಯ ಅಧ್ಯಾಯ

ನೀವು ಮಾಡಿದ ಉಪಕಾರಕ್ಕೆ ನಾವು ಮಾಡಬೇಕಾದ ಪ್ರತ್ಯುಪಕಾರವನ್ನೂ ನಿಮ್ಮ ಬಲವನ್ನೂ ಸ್ನೇಹಿತರಿಗೆ ಹಿತವನ್ನು ಬಯಸುವ ನಿಮ್ಮ ಅಂತರಂಗವನ್ನೂ ಬಲ್ಲೆನು. ಸುಗ್ರೀವನು ಕಾಮಾಸಕ್ತನಾಗಿ ನಿಮ್ಮ ಕಾರ್ಯದಲ್ಲಿ ಆಲಸ್ಯವುಳ್ಳವನಾಗಿರುವುದನ್ನೂ ಶ್ರೀರಾಮನು ವಿರಹಲೋಕದಿಂದ ಕಂಗೆಟ್ಟು ವಿಷಯಾದಿ ಸಮಸ್ತ ಸುಖಗಳನ್ನು ಬಿಟ್ಟಿರುವುದನ್ನೂ ಬಲ್ಲೆನು. ಕಾಮಾತುರನಾದ ಪುರುಷನು ಧರ್ಮಾರ್ಥಗಳನ್ನು ಸಂಪಾದಿಸುವ ಕಾಲವನ್ನರಿಯನು. ಸುಗ್ರೀವನು ಕಾಮದಲ್ಲಿ ಲೋಲುಪ್ತಿಯುಳ್ಳವನಾಗಿ ಲಜ್ಜೆಯನ್ನು ತೊರೆದು ಕಾರ್ಯಗತಿಯನ್ನರಿಯದಿದ್ದಾನೆ. ನಿನ್ನ ಒಡಹುಟ್ಟಿದವನೆಂದು ತಿಳಿದು ಸುಗ್ರೀವನ ಅಪರಾಧವನ್ನು ಕ್ಷಮಿಸು. ಲೋಕದಲ್ಲಿ ತಪಸ್ವಿಗಳೊಂದಿಗೆ ಕೂಡ ಕಾಮಾಧೀನರಾಗಿ ಮೋಹವಶರಾಗಿದ್ದಾರೆ. ಸುಗ್ರೀವನು ಜಾತಿಯಲ್ಲಿ ಕಪಿಯೂ ಚಪಲನೂ ಆದ್ದರಿಂದ ವಿಷಯಸುಖಾನುಭವಗಳನ್ನು ಬಿಡದೆಯೂ ನೀತಿಮಾರ್ಗವನ್ನು ಕಾಣದೆಯೂ ಇದ್ದಾನೆ'' ಎಂದು ಸಮಾಧಾನದ ಮಾತುಗಳನ್ನಾಡಿದಳು. ಮತ್ತೆ ಲಕ್ಷ್ಮಣನ ಮೃದು ಹೃದಯವನ್ನು ಕಂಡು ತನ್ನ ಪತಿಗೆ ಹಿತವಾದ ಕಾರ್ಯವನ್ನು ಚಿಂತಿಸುತ್ತ ಆತನನ್ನು ಕುರಿತು '' ಎಲೈ ಲಕ್ಷ್ಮಣ, ಸುಗ್ರೀವನು ಕಾಮುಕನಾಗಿ ಸ್ತ್ರೀಲೋಲನಾಗಿದ್ದರೂ ನೀನು ಬರುವುದಕ್ಕೆ ಮೊದಲೇ ಹನುಮಂತನು ಶರತ್ಕಾಲವು ಬಂದಿತೆಂದೂ ಶ್ರೀರಾಮನ ಕಾರ್ಯವನ್ನು ಸಾಧ್ಯಮಾಡಿಕೊಡುವುದಕ್ಕೆ ಸಮಯವಾದ್ದರಿಂದ ಸುಮ್ಮನಿರಕೂಡದೆಂದೂ ತಿಳುಹಿಸಿದನು.

ಆಗಲೇ ಸುಗ್ರೀವನು ಸೇನಾಪತಿಗಳನ್ನು ಕರೆಯಿಸಿ ಸಮಸ್ತ ಸೇನೆಯನ್ನು ಮೇಳೈಸಬೇಕೆಂದು ಕಟ್ಟುಮಾಡಿದ್ದಾನೆ. ಈಗ ನಾನಾ ದಿಕ್ಕುಗಳಲ್ಲಿಯೂ ಪರ್ವತಗಳಲ್ಲಿಯೂ ಇದ್ದ ಅನೇಕ ಕೋಟಿ ವಾನರರು ಬಂದಿದ್ದಾರೆ. ನೀನು ಸುಗ್ರೀವನ ಅಭಿಮಾನವನ್ನು ಕಾದು ಪರಿಪಾಲಿಸು. ನಿನ್ನ ಮಿತ್ರನಾದ ಸುಗ್ರೀವನ ಮನೆಯನ್ನೂ ಸಂಪತ್ತನ್ನೂ ನೋಡು. ಒಳಗೆ ಬಾ'' ಎಂದು ಕರೆದಳು.

ಲಕ್ಷ್ಮಣನು ಆ ಅಂತಃಪುರಕ್ಕೆ ಹೋಗಿ ರತ್ನಖಚಿತವಾದ ಸಿಂಹಾಸನದಲ್ಲಿ ಅನರ್ಘ್ಯವಾದ ಹಾಸಿಗೆಯ ಮೇಲೆ ಕುಳಿತುಕೊಂಡು ಬಾಲಸೂರ್ಯನಿಗೆ ಸಮಾನವಾದ ದಿವ್ಯಸ್ವರೂಪವುಳ್ಳವನಾಗಿ ದಿವ್ಯಾಭರಣಭೂಷಿತನಾಗಿದ್ದ ಸುಗ್ರೀವನನ್ನು ಕಂಡನು. ಆ ಸುಗ್ರೀವನು ರುಮಾದೇವಿಯನ್ನು ಆಲಿಂಗಿಸಿಕೊಂಡು ಸ್ವೀಪರಿವಾರದ ಮಧ್ಯದಲ್ಲಿ ಸಿಂಹಾಸನದ ಮೇಲೆ ಕುಳಿತಿದ್ದನು. ಅದನ್ನು ಕಂಡು ಲಕ್ಷ್ಮಣನ ನೇತ್ರಗಳು ಕೋಪದಿಂದ ಕೆಂಡವಾದವು.

### ಲಕ್ಷ್ಮಣನು ಸುಗ್ರೀವನನ್ನು ನಿಂದಿಸಿದ್ದು

ಆಗ ಅತ್ಯಂತ ಕ್ರುದ್ಧನಾಗಿ ಬೆಂಕಿಯಂತೆ ಪ್ರಜ್ವಲಿಸುತ್ತ ಸರ್ಪದಂತೆ ನಿಟ್ಟುಸಿರು ಬಿಡುತ್ತ ಎದುರಿಗೆ ಬಂದ ಲಕ್ಷ್ಮಣನನ್ನು ಕಂಡ ಕೂಡಲೆ ಸುಗ್ರೀವನು ಖಿನ್ನನಾದನು.

ಮುಂದುವರಿಯುವುದು...

**ಬೇಸಿಗೆ ಕಾಲ ಶುರುವಾದಂತೆ ಚರ್ಮದ ಸಮಸ್ಯೆಗಳು ಕೂಡ ಹೆಚ್ಚಾಗುತ್ತಾ ಹೋಗುತ್ತವೆ. ಏಕೆಂದರೆ ಇಂತಹ ಸಂದರ್ಭದಲ್ಲಿ ವಾತಾವರಣದ ತಾಪಮಾನ ಹಾಗೂ ವಿಪರೀತ ಸೂರ್ಯನ ಉರಿ ಬಿಸಿಲಿನ ಕಾರಣಗಳಿಂದಾಗಿ ಚರ್ಮಕ್ಕೆ ಸಂಬಂಧಪಟ್ಟ ಸಮಸ್ಯೆಗಳು ಬಹಳ ಬೇಗನೇ ಕಾಣಿಸಿಕೊಳ್ಳುತ್ತವೆ.**

ಸರಿಯಾದ ಚರ್ಮದ ಆರೈಕೆ ವಿಧಾನವನ್ನು ತೆಗೆದುಕೊಂಡರೆ ಅತಿಯಾದ ಬಿಸಿಯಿಂದ ಚರ್ಮ ಹಾನಿಯಾಗುವುದು ತಪ್ಪುತ್ತದೆ. ಇಲ್ಲದಿದ್ದರೆ ಸನ್ ಬರ್ನ್, ಚರ್ಮದ ಮೇಲೆ ಮತ್ತು ದದ್ದುಗಳು, ಪ್ರಮುಖವಾಗಿ ಸೂರ್ಯನ ಯುವಿ ಕಿರಣಗಳಿಂದ ಚರ್ಮ ಕೆಂಪಗಾಗುವುದು ಅಥವಾ ಕಪ್ಪಾಗುವುದು ಹೀಗೆ ಚರ್ಮಕ್ಕೆ ಸಂಬಂಧಪಟ್ಟ ಆರೋಗ್ಯ ಸಮಸ್ಯೆಗಳು ಬಹಳ ಬೇಗನೇ ಕಾಡಲು ಶುರುವಾಗುತ್ತದೆ.

# ಚರ್ಮದಲ್ಲಿ ಟ್ಯಾನ್ ಜಾಸ್ತಿ ಆಗ್ತಿದ್ಯಾ?

ಈ ಬಗ್ಗೆ ಬೆಂಗಳೂರಿನ ಆಸ್ಟರ್ ಆರ್‌ವಿ ಆಸ್ಪತ್ರೆಯ ಚರ್ಮರೋಗ ಹಾಗೂ ಸೌಂದರ್ಯ ತಜ್ಞ ಡಾ. ಸುನೀಲ್ ಕುಮಾರ್ ಪ್ರಭು ಅವರು ಹೇಳುವ ಪ್ರಕಾರ ಚರ್ಮದ ನೈಸರ್ಗಿಕ ರಕ್ಷಣಾ ವ್ಯವಸ್ಥೆಯು ತನ್ನ ಶಕ್ತಿಯನ್ನು ಹೆಚ್ಚಿಸುವ ಮೂಲಕ ರಕ್ಷಣೆ ಪಡೆಯಬೇಕು, ಇದು ಹಾನಿಕಾರಕ ನೇರಳಾತೀತ ವಿಕಿರಣವು ಚರ್ಮವನ್ನು ತಲುಪುವುದನ್ನು ತಡೆಯುತ್ತದೆ.

ಮೊದಲ ಹಂತವೆಂದರೆ ಜನರು ವಿಟಮಿನ್ ಸಿ ಮತ್ತು ವಿಟಮಿನ್ ಇ ಮತ್ತು ನಿಯಾಸಿನಮೈಡ್ ಸೇರಿದಂತೆ ಉತ್ಕರ್ಷಣ ನಿರೋಧಕ ಘಟಕಗಳನ್ನು ಒಳಗೊಂಡಿರುವ ಚರ್ಮದ ಆರೈಕೆ ಉತ್ಪನ್ನಗಳನ್ನು ಬಳಸುವುದು.

ಈ ಪದಾರ್ಥಗಳು ಚರ್ಮವನ್ನು ಸೂರ್ಯನ ಹಾನಿಯಿಂದ ರಕ್ಷಿಸುತ್ತವೆ ಏಕೆಂದರೆ ಅವು ಸೂರ್ಯನು ಚರ್ಮದ ಮೇಲೆ ದಾಳಿ ಮಾಡುವುದರಿಂದ ಸೃಷ್ಟಿಸುವ ಫ್ರೀ ರಾಡಿಕಲ್‌ಗಳನ್ನು ತಡೆಯುತ್ತವೆ ಮತ್ತು ಚರ್ಮವು ಕಪ್ಪು ಕಲೆಗಳು ಮತ್ತು ಅಸಮ ಬಣ್ಣವನ್ನು ಬೆಳೆಸಿಕೊಳ್ಳುವುದನ್ನು ತಡೆಯುತ್ತವೆ.

| ಸನ್ ಬರ್ನ್ ಲಕ್ಷಣಗಳು | ಸನ್ ಟ್ಯಾನ್ ಲಕ್ಷಣಗಳು |
|---|---|
| ● ಉರಿಯೂತ ಕಾಣಿಸಿಕೊಳ್ಳುವುದು | ● ಚರ್ಮದ ಬಣ್ಣ ಕಡು ಕಂದು ಅಥವಾ ಕಪ್ಪು ಬಣ್ಣಕ್ಕೆ ತಿರುಗುವುದು |
| ● ಚರ್ಮದ ಮೇಲಿನ ಕೆಂಪು ಕಲೆಗಳು | ● ತುರಿಕೆ, ಉರಿಯೂತ ಕಾಣಿಸಿಕೊಳ್ಳುವುದು |
| ● ನೋವು, ಊತ ಮತ್ತು ತುರಿಕೆ | ● ಮುಖ, ಕೈ ಮತ್ತು ಕಾಲುಗಳ ಮೇಲೆ ಗಾಢ ಕಲೆಗಳು ಕಾಣಿಸಿಕೊಳ್ಳುವುದು |
| ● ಜ್ವರ, ಶೀತ, ತಲೆನೋವು ಮತ್ತು ದಣಿವು ಕಾಣಿಸಿಕೊಳ್ಳುವುದು | ● ಚರ್ಮದ ಪದರಗಳು ಬಿಳಿಚಿಕೊಳ್ಳುವುದು |



ಜನರು ಹೊರಗೆ ಹೋಗಿ ಬಂದ ತಕ್ಷಣ ಸ್ನಾನ ಮಾಡಬೇಕು ಏಕೆಂದರೆ ಈ ಅಭ್ಯಾಸವು ದೇಹದ ಉಪ್ಪು ಮತ್ತು ಬೆವರು ಮತ್ತು ಚರ್ಮವನ್ನು ಕಪ್ಪಾಗಿಸುವ ಹೊರಾಂಗಣ ಮಾಲಿನ್ಯಕಾರಕಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ.

ಚರ್ಮದ ತಡೆಗೋಡೆಗೆ ಹಾನಿ ಮಾಡುವ ಮತ್ತು ವಿಕಿರಣಕ್ಕೆ ಹೆಚ್ಚು ಗುರಿಯಾಗುವಂತೆ ಮಾಡುವ ಬಲವಾದ ಸೋಪ್‌ಗಳನ್ನು ಬಳಸುವ ಬದಲು ಜನರು ಸಮತೋಲನವನ್ನು ಕಾಯ್ದುಕೊಳ್ಳುವ ಸೌಮ್ಯವಾದ ಕ್ಲೆನ್ಸರ್‌ಗಳನ್ನು ಬಳಸಬೇಕು.

ಜನರು ಪ್ರತಿ ವಾರ ಒಂದು ಅಥವಾ ಎರಡು ಬಾರಿ ಸೌಮ್ಯವಾದ ಸ್ಕ್ರಬ್‌ಗಳು ಮತ್ತು ಲ್ಯಾಕ್ಟಿಕ್ ಆಮ್ಲವನ್ನು ಒಳಗೊಂಡಿರುವ ರಾಸಾಯನಿಕ ಎಕ್ಸ್‌ಫೋಲಿಯಂಟ್‌ಗಳನ್ನು ಬಳಸಿ ತಮ್ಮ ಚರ್ಮವನ್ನು ಎಫ್ಫೋಲಿಯೇಟ್ ಮಾಡಬೇಕು ಏಕೆಂದರೆ ಈ ಅಭ್ಯಾಸವು ಡೆಡ್ ಸ್ಕಿನ್ ಟ್ಯಾನ್ ಆಗಿರುವ ಚರ್ಮವನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ ಮತ್ತು ಚರ್ಮದ ಪುನರುತ್ಪಾದನೆಯನ್ನು ವೇಗಗೊಳಿಸುತ್ತದೆ.

ಜನರು ತಮ್ಮ ಚರ್ಮವನ್ನು ಅತಿಯಾಗಿ ಎಫ್ಫೋಲಿಯೇಟ್ ಮಾಡಬಾರದು ಏಕೆಂದರೆ ಈ ಅಭ್ಯಾಸವು ಚರ್ಮದ ಉರಿಯೂತಕ್ಕೆ ಕಾರಣವಾಗುತ್ತದೆ ಮತ್ತು ಚರ್ಮವನ್ನು ಸೂರ್ಯನ ಬೆಳಕಿಗೆ ಹೆಚ್ಚು ದುರ್ಬಲಗೊಳಿಸುತ್ತದೆ.

ಕ್ಲೀವ್ಲ್ಯಾಂಡ್ ಕ್ಲಿನಿಕ್ ಪ್ರಕಾರ, ಸೂರ್ಯನ ನೇರಳಾತೀತ ಕಿರಣಗಳಿಂದ ಚರ್ಮಕ್ಕೆ ಉಂಟಾಗುವ ಗಂಭೀರ ಹಾನಿಯಾಗಿದ್ದು, ಇದು ಪ್ರಮುಖವಾಗಿ ಚರ್ಮದಲ್ಲಿ ಕೆಂಪು ಬಣ್ಣ, ಉರಿಯೂತ, ನೋವು ಮತ್ತು ತೀವ್ರ ಸಂದರ್ಭಗಳಲ್ಲಿ ಗುಳ್ಳೆಗಳನ್ನು ಉಂಟು ಮಾಡುವ ಸಾಧ್ಯತೆಗಳು ಇರುತ್ತವೆ.

ಕೆಲವೊಮ್ಮೆ ಇದು ತುಂಬಾನೇ ಉರಿಯೂತ, ನೋವಿನಿಂದ ಕೂಡಿರುತ್ತದೆ. ಪ್ರಮುಖವಾಗಿ ದೀರ್ಘಕಾಲದವರೆಗೆ ಸೂರ್ಯನಿಗೆ ಒಡ್ಡಿಕೊಂಡಾಗ ಇದು ಸಂಭವಿಸುತ್ತದೆ. ವಾಸ್ತವವಾಗಿ, ಬೇಸಿಗೆಯಲ್ಲಿ, ಸೂರ್ಯನಿಂದ ಹೊರಸೂಸುವ ನೇರಳಾತೀತ ಕಿರಣಗಳು ನಮ್ಮ ಚರ್ಮದ ಉರಿಯೂತಕ್ಕೆ ಕಾರಣ ವಾಗುತ್ತದೆ. ಆದ್ದರಿಂದ, ಬೇಸಿಯ ಉರಿಬಿಸಿಲಿನ ಸಂದರ್ಭದಲ್ಲಿ ಹೊರಗೆ ಹೋದಾಗಲೆಲ್ಲಾ ಸನ್‌ಸ್ಕ್ರೀನ್ ಬಳಸಿ. ಸಾಧ್ಯವಾದಷ್ಟು ನೀರು ಕುಡಿಯಿರಿ ಸೂರ್ಯನ ಬೆಳಕಿಗೆ ಒಡ್ಡಿಕೊಳ್ಳುವುದರಿಂದ ನಮ್ಮ ಚರ್ಮವು ಎರಡು ಬಣ್ಣಗಳಲ್ಲಿ ಕಾಣಿಸಿಕೊಂಡರೆ, ಅದನ್ನು ಸನ್ ಟ್ಯಾನಿಂಗ್ ಎಂದು ಕರೆಯಲಾಗುತ್ತದೆ. ವೈಜ್ಞಾನಿಕವಾಗಿ ಹೇಳುವುದಾದರ ಸೂರ್ಯನ ನೇರಳಾತೀತ ಕಿರಣಗಳು ಚರ್ಮದ ಮೇಲೆ ನೇರವಾಗಿ ಒಡ್ಡಿಕೊಂಡಾಗ ಮೆಲನಿನ್ ಉತ್ಪಾದನೆಯಾಗಿ ಚರ್ಮವು ಕಪ್ಪಾಗುವ ಪ್ರಕ್ರಿಯೆಯಾಗಿದೆ.

ಚರ್ಮದಲ್ಲಿ ಇಂತಹ ಸಮಸ್ಯೆಗಳು ಕಾಣಿಸಿಕೊಂಡಾಗ ಯಾವುದೇ ದದ್ದು ಅಥವಾ ಕಲೆಗಳನ್ನು ಉಂಟುಮಾಡುವುದಿಲ್ಲ. ಆದರೆ ತ್ವಚೆಯ ಅಂದ ಹಾಳಾಗುವುದರ ಜೊತೆಗೆ, ಚರ್ಮ ಗಾಢಬಣ್ಣವನ್ನು ಪಡೆಯುತ್ತದೆ.


### ಬೇಸಿಗೆಯಲ್ಲಿ ಸನ್ ಟ್ಯಾನ್ ಆಗದಂತೆ ತಡೆಯುವ ವಿಧಾನ

ಸನ್‌ಸ್ಕ್ರೀನ್ ಕ್ರೀಮ್ ಅಥವಾ ಲೋಷನ್ ಹಚ್ಚುವುದು. ಸೂರ್ಯನ ಯುವಿ ಕಿರಣದಿಂದ ಚರ್ಮವನ್ನು ರಕ್ಷಿಸಲು ಸನ್‌ಸ್ಕ್ರೀನ್ ಕ್ರೀಮ್ ಅಥವಾ ಲೋಷನ್ ಅನ್ನು ಬಳಸುತ್ತಾ ಬರಬೇಕು. ಇದು ತ್ವಚೆಯ ಮೇಲೆ ಉಂಟಾಗುವ ಹಾನಿಯನ್ನು ಸುಲಭವಾಗಿ ನಿವಾರಿಸಲು ನೆರವಿಗೆ ಬರುತ್ತದೆ.

## ನ್ಯಾಯಮೂರ್ತಿ ಯಶವಂತ್ ವರ್ಮಾ ವಿರುದ್ಧದ ತನಿಖಾ ಸಮಿತಿ ಪುನಾರಚನೆ

**ನವದೆಹಲಿ:** ಕಳೆದ ವರ್ಷ ಮಾರ್ಚ್‌ನಲ್ಲಿ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರ ನಿವಾಸದಿಂದ ಸುಟ್ಟುಹೋದ ನಗದು ಹಣ ವಶಪಡಿಸಿಕೊಳ್ಳಲಾದ ನಂತರ, ಅವರನ್ನು ಪದಚ್ಯುತಗೊಳಿಸಲು ಕಾರಣಗಳನ್ನು ತನಿಖೆ ಮಾಡಲು ರಚಿಸಲಾಗಿದ್ದ ಮೂವರು ಸದಸ್ಯರ ಸಮಿತಿಯನ್ನು ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಪುನರ್‌ರಚಿಸಿದ್ದಾರೆ.

ಅಲಹಾಬಾದ್ ಹೈಕೋರ್ಟ್ ನ್ಯಾಯಾಧೀಶರನ್ನು ಪದಚ್ಯುತಗೊಳಿಸಲು ಬಹುಪಕ್ಷೀಯ ನೋಟಿಸ್ ಅನ್ನು ಸ್ವೀಕರಿಸಿದ ನಂತರ ಸ್ಪೀಕರ್ ಕಳೆದ ವರ್ಷ ಆಗಸ್ಟ್ 12 ರಂದು ಸಮಿತಿಯನ್ನು ರಚಿಸಿದ್ದರು, ಇದು ಅವರ ದೋಷಾರೋಪಣೆ ಪ್ರಕ್ರಿಯೆಯನ್ನು ಪ್ರಾರಂಭಿಸಿತು. ಅಧಿಸೂಚನೆಯ ಭಾಗಶಃ ಮಾರ್ಪಾಡಿನಲ್ಲಿ ಅಲಹಾಬಾದ್ ಹೈಕೋರ್ಟ್‌ನ ನ್ಯಾಯಮೂರ್ತಿ ಯಶವಂತ್ ವರ್ಮಾ ಅವರನ್ನು ಪದಚ್ಯುತಗೊಳಿಸಲು ಕೋರಲಾದ ಆಧಾರದ ಬಗ್ಗೆ ತನಿಖೆ ನಡೆಸುವ ಉದ್ದೇಶದಿಂದ, ಲೋಕಸಭಾ ಸ್ಪೀಕರ್ ಮಾರ್ಚ್ 6, 2026 ರಿಂದ ಜಾರಿಗೆ ಬರುವಂತೆ ಪುನರ್ ರಚಿಸಿದ್ದಾರೆ.



ಸಮಿತಿಯಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಅರವಿಂದ್ ಕುಮಾರ್, ಬಾಂಬೆ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಚಂದ್ರಶೇಖರ್, ಕರ್ನಾಟಕ ಹೈ ಕೋರ್ಟ್‌ನ ಹಿರಿಯ ವಕೀಲ ಬಿ.ವಿ. ಆಚಾರ್ಯ ಇರಲಿದ್ದಾರೆ ಎಂದು ಲ ೋಕಸಭೆಯ ಪ್ರಧಾನ ಕಾರ್ಯದರ್ಶಿ ಉತ್ಪಲ್ ಕುಮಾರ್ ಸಿಂಗ್ ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಿದ್ದಾರೆ. ನ್ಯಾಯಮೂರ್ತಿ ಕುಮಾರ್, ಆಚಾರ್ಯ ಅವರು ಹಿಂದಿನ ಸಮಿತಿಯ ಭಾಗವಾಗಿದ್ದರೂ, ನ್ಯಾಯಮೂರ್ತಿ ಚಂದ್ರಶೇಖರ್ ಹೊಸ ಸದಸ್ಯರಾಗಿದ್ದಾರೆ. ಅವರು ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ ಮನೀಂದ್ರ ಮೋಹನ್ ಶ್ರೀವಾಸ್ತವ ಅವರನ್ನು ಬದಲಾಯಿಸಿದ್ದಾರೆ.


### ಇಂಡಿಯಾ ಬಜೆಟ್‌ನಲ್ಲಿ ಚಾಬಹಾರ್‌ಗೆ ಅನುದಾನ ಇಲ್ಲವೆಂದು ಇರಾನ್ ಸಚಿವ ಬೇಸರ

## ಭಾರತಕ್ಕೆ 'ಗೋಲ್ಡನ್ ಡೋರ್'ನಂತಿರೋ ಯೋಜನೆಯ ಮಹತ್ವವೇನು?

**ಹೊಸದಿಲ್ಲಿ:** ಭಾರತ, ಮಧ್ಯ ಏಷ್ಯಾ ನಡುವೆ ನೇರ ಮಾರ್ಗಕ್ಕೆ ಇರಾನ್ ನೊಂದಿಗೆ ಭಾರತ ಮಾಡಿಕೊಂಡಿದ್ದ ಮಹತ್ವಪೂರ್ಣ ಒಪ್ಪಂದ ಚಾಬಹಾರ್ ಬಂದರು ಯೋಜನೆ . ಆದರೆ, ಈ ಸಾಲಿನ ಬಜೆಟ್‌ನಲ್ಲಿ ಭಾರತ ಈ ಚಾಬಹಾರ್ ಬಂದರು ಯೋಜನೆಗೆ ಯಾವುದೇ ಹಣವನ್ನು ಅನುಮೋದಿಸಿರುವ ಬಗ್ಗೆ ಘೋಷಿಸಿದ್ದು, ಈ ಕುರಿತು ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಬೇಸರ ವ್ಯಕ್ತಪಡಿಸಿದ್ದಾರೆ.

**ಚಾಬಹಾರ್ ಬಂದರು ಯೋಜನೆಗೆ ಹಣ ಈ ಬಾರಿಯ ಬಜೆಟ್ ನಲ್ಲಿ ಮೀಸಲಿಡದ ಭಾರತ:** ಇರಾನ್ ವಿದೇಶಾಂಗ ಸಚಿವ ಇಂಡಿಯಾ ಟುಡೇಗೆ ನೀಡಿದ ಸಂದರ್ಶನದಲ್ಲಿ ಈ ಬಗ್ಗೆ ಹೇಳಿಕೊಂಡಿದ್ದಾರೆ. ಚಾಬಹಾರ್ ಬಂದರು ಯೋಜನೆಗೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಹಣವನ್ನು ಮೀಸಲಿಟ್ಟಿರುವುದಾಗಿ ಭಾರತ ಘೋಷಿಸದೆ ಇರುವುದು ನಿಮಗೆ ಬೇಸರವಿದೆಯೇ ಎಂದು ಸಂದರ್ಶಕರು ಕೇಳಿದ ಪ್ರಶ್ನೆಗೆ ಉತ್ತರಿಸಿದ ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಹೌದು ಎಂದು ತಿಳಿಸಿದ್ದಾರೆ. ಈ ಕುರಿತು ಮಾತನಾಡುತ್ತಾ ಇದು ಭಾರತ, ಇರಾನ್ ಉಭಯರಿಗೆ ನಿರಾಶೆಯನ್ನುಂಟು ಮಾಡಿದೆ ಎಂದು ನಾನು ಭಾವಿಸುತ್ತೇನೆ.

ಏಕೆಂದರೆ ಪ್ರಧಾನಿ ನರೇಂದ್ರ ಮೋದಿಯವರು ಒಮ್ಮೆ ಹೇಳಿದಂತೆ ಈ ಚಾಬಹಾರ್ ಯೋಜನೆ ಹಿಂದೂ ಮಹಾಸಾಗರವನ್ನು ಮಧ್ಯ ಏಷ್ಯಾ, ಕಾಕಸಸ್, ಅಲ್ಲಿಂದ ಮುಂದಕ್ಕೆ ಯುರೋಪ್‌ಗೆ ಸಂಪರ್ಕಿಸಬಲ್ಲ ಸುವರ್ಣ ದ್ವಾರವಾಗಿದೆ. ಇದೊಂದು ಅತ್ಯಂತ ಪ್ರಮುಖ ಕಾರ್ಯತಂತ್ರದ ಬಂದರಾಗಿದ್ದು, ಇದು ಸಂಪೂರ್ಣವಾಗಿ ಅಭಿವೃದ್ಧಿಯಾದರೆ ಭಾರತವನ್ನು ಇರಾನ್ ಮೂಲಕ ಮಧ್ಯ ಏಷ್ಯಾ, ಯುರೋಪ್ ಸಂಪರ್ಕಿಸುವಲ್ಲಿ ಬಹಳ ಮುಖ್ಯವಾದ ಪಾತ್ರವನ್ನು ವಹಿಸಲಿದೆ ಎಂದು ತಿಳಿಸಿದ್ದಾರೆ.



ಸಾರಿಗೆ ಮಾರ್ಗ ಸುಗಮ

ಮುಂದುವರೆದು, ಇದೊಂದು ಅತ್ಯುತ್ತಮ ಸಾರಿಗೆ ಮಾರ್ಗವಾಗಿ ಕಾರ್ಯ ನಿರ್ವಹಿಸಬಹುದು. ಬಹುಶಃ ಒಂದು ದಿನ ನಾವು ಈ ಬಂದರಿನ ಸಂಪೂರ್ಣ ಅಭಿವೃದ್ಧಿಯನ್ನು ವೀಕ್ಷಿಸ ಬಹುದು ಎಂದು ನಾನು ಭಾವಿಸುತ್ತೇನೆ ಎಂದು ಭರವಸೆಯನ್ನು ವ್ಯಕ್ತಪಡಿಸಿದ್ದಾರೆ.

**ಭಾರತದ ಪಾಲಿಗೆ ಗೋಲ್ಡನ್ ಡೋರ್ ಈ ಚಾಬಹಾರ್ ಬಂದರು ಯೋಜನೆ:** ಇನ್ನು, ಭಾರತದ ಪಾಲಿಗೆ ಈ ಚಾಬಹಾರ್ ಬಂದರು ಯೋಜನೆ ಅತ್ಯಂತ ಮಹತ್ವ ಪೂರ್ಣ, ಕಾರ್ಯತಂತ್ರದಿಂದ ಕೂಡಿದೆ. ಇದಕ್ಕೆ ಕಾರಣ ಮಧ್ಯ ಏಷ್ಯಾವನ್ನು ತಲುಪಲು ಪಾಕಿಸ್ತಾನ ಮೊದಲಿನಿಂದಲೂ ಭಾರತ ಭೂ ಸಾರಿಗೆಯನ್ನು ಅಡ್ಡಿಪಡಿಸುತ್ತಲೇ ಇದೆ.

ಆದರೆ, ಈ ಯೋಜನೆಯಿಂದ ಭಾರತ ಪಾಕಿಸ್ತಾನವನ್ನು ಬೈಪಾಸ್ ಮಾಡುವ ಮೂಲಕ ಅಫ್ಘಾನಿಸ್ತಾನ, ಮಧ್ಯ ಏಷ್ಯಾಗೆ ತಲುಪುವಂತೆ ಮಾಡಲಿದ್ದು, ನೇರ ವ್ಯಾಪಾರ, ಸಾರಿಗೆ ಮಾರ್ಗವನ್ನು ಸುಗಮವಾಗಿಸಲಿದೆ. ಅಷ್ಟೇ ಅಲ್ಲದೆ, ಕಾರ್ಯತಂತ್ರದ ದೃಷ್ಟಿಯಿಂದಲೂ ಸಾಕಷ್ಟು ಮಹತ್ವವನ್ನು ಪಡೆದಿದ್ದು, ಚೀನಾ ಈಗಾಗಲೇ ಪಾಕಿಸ್ತಾನದಲ್ಲಿ ಗ್ವಾದರ್ ಬಂದರನ್ನು ನಿರ್ಮಿಸುತ್ತಿದ್ದು, ಅಲ್ಲಿಂದ ಕೇವಲ 170 ಕಿಲೋ ಮೀಟರ್ ದೂರದಲ್ಲಿ ಚಾಬಹಾರ್ ಬಂದರಿದೆ. ಹಾಗಾಗಿ ಈ ಮೂಲಕ ಅರಬ್ಬಿ ಸಮುದ್ರದಲ್ಲಿ ಚೀನಾದ ಪ್ರಾಬಲ್ಯವನ್ನು ಹೆಚ್ಚಾಗದಂತೆ ಮಾಡಿ ಅರಬ್ಬಿ ಸಮುದ್ರದಲ್ಲಿ ಭಾರತದ ಸಾಮರ್ಥ್ಯವನ್ನು ಹೆಚ್ಚಿಸುವಲ್ಲಿ ಕಾರ್ಯನಿರ್ವಹಿಸುತ್ತದೆ.

### ಚಾಬಹಾರ್ ಪೋರ್ಟ್‌ಗೆ ಬಜೆಟ್ ನೀಡದಿರಲು US-ಇರಾನ್ ಉದ್ವಿಗ್ನತೆ ಕಾರಣ?

**ಅಮೆರಿಕ, ಇರಾನ್ ನಡುವಿನ ಉದ್ವಿಗ್ನತೆಯ ನಡುವೆ ಅಮೆರಿಕ ಕಳೆದ ವರ್ಷ ಇರಾನ್‌ನ ಚಾಬಹಾರ್ ಬಂದರಿನ ಮೇಲೆ ಸಂಪೂರ್ಣ ನಿಷೇಧವನ್ನು ಹೇರಿತ್ತು. ಇನ್ನು, ಇದಕ್ಕೂ ಮೊದಲೇ 2024ರ ಮೇ ತಿಂಗಳಿನಲ್ಲಿ ಚಾಬಹಾರ್ ಬಂದರಿನ ಟರ್ಮಿನಲ್ ವೊಂದನ್ನು 10 ವರ್ಷಗಳ ಕಾಲ ನಿರ್ವಹಿಸುವ ಒಪ್ಪಂದಕ್ಕೆ ಭಾರತ ಸಹಿ ಹಾಕಿತ್ತು. ಈಗಾಗಲೇ ಈ ಯೋಜನೆಗಾಗಿ 2024-25ರ ಬಜೆಟ್‌ನಲ್ಲಿ 100 ಕೋಟಿ ರೂ. ಮೀಸಲಿಡುವುದಾಗಿ ಘೋಷಿಸಿತ್ತು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ಅಮೆರಿಕ, ಇರಾನ್ ದೇಶಗಳ ನಡುವೆ ಸಾಕಷ್ಟು ಘರ್ಷಣೆಗಳು ನಡೆಯುತ್ತಿದ್ದು, ಈ ನಡುವೆ ಭಾರತ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಗೆ ಯಾವುದೇ ಹಣ ಮೀಸಲಿಡದೆ ಇರುವುದು ಗಮನ ಸೆಳೆದಿದೆ.**

## ಭಗವದ್ಗೀತೆ ಹಿಡಿದು ಪ್ರಮಾಣ ವಚನ ಸ್ವೀಕರಿಸಿದ ಕೀನ್ಯಾ ಶಾಸಕ

**ಕೀನ್ಯಾ:** ಕೀನ್ಯಾದಲ್ಲಿ ಯುವ ರಾಜಕೀಯ ನಾಯಕರೊಬ್ಬರು ಬಲಗೈಯಲ್ಲಿ ಭಗವದ್ಗೀತೆ ಹಿಡಿದು ಪ್ರಮಾಣ ವಚನ ಸ್ವೀಕರಿಸುವ ಮೂಲಕ ವಿಶ್ವದ ಗಮನ ಸೆಳೆದಿದ್ದಾರೆ.ಮೊಂಬಾಸಾದ ಕೌಂಟಿಯಲ್ಲಿರುವ ವಿಧಾನಸಭೆಯಲ್ಲಿ ಈ ಐತಿಹಾಸಿಕ ಘಟನೆ ನಡೆದಿದೆ. ಮೊಂಬಾಸಾ ಕೌಂಟಿಯ ಚಂಗಮ್ವೆ ಕ್ಷೇತ್ರವನ್ನು ಪ್ರತಿನಿಧಿಸುವ ಯುವ ಶಾಸಕ ಕ್ಯಾಲೆಬ್ ಪ್ರಮಾಣವಚನ ಸ್ವೀಕರಿಸಲು ಭಗವದ್ಗೀತೆಯೊಂದಿಗೆ ಬಂದು ಬಲಗೈಯಲ್ಲಿ ಗೀತೆ ಹಿಡಿದು ಪ್ರಮಾಣ ವಚನ ಸ್ವೀಕರಿಸಿದರು.

ಈ ಕುರಿತು ಇಸ್ಕಾನ್‌ನ ಓಂಕಾರ ಮುಕುಂದ ದಾಸ್ ಮಾತನಾಡಿ, ಈ ನಡೆ ನಾಟಕೀಯವಲ್ಲ, ಪ್ರಚಾರಕ್ಕೂ ಅಲ್ಲ ಆ ಭಾವ ಅವರ ಹೃದಯಲ್ಲಿ ಹುಟ್ಟಿಕೊಂಡಿರುವುದು, ಅದೇ ಸತ್ಯ, ಇದು ಉದ್ದೇಶ ಪೂರ್ವಕ ನಡೆ ಎಂದರು. ಸಾರ್ವಜನಿಕ ಹುದ್ದೆಯು ಹೆಚ್ಚಾಗಿ ಪ್ರಬಲ ಧಾರ್ಮಿಕ ಸಂಪ್ರದಾಯಗಳೊಂದಿಗೆ ಹೆಣೆದುಕೊಂಡಿರುವ



ರಾಷ್ಟ್ರದಲ್ಲಿ, ಭಗವದ್ಗೀತೆಯ ಮೇಲೆ ಪ್ರಮಾಣ ಮಾಡುವ ಕ್ಯಾಲೆಬ್ ಅವರ ನಿರ್ಧಾರವು ಹೊಸ ಭರವಸೆಯನ್ನು ಹುಟ್ಟುಹಾಕಿದೆ.ಕ್ಯಾಲೆಬ್ ಹರೇ ಕೃಷ್ಣ ಸಮುದಾಯದಲ್ಲಿರುವ ಭಕ್ತ, ಅವರ ಅಣ್ಣನ ಮೂಲಕ ಇಸ್ಕಾನ್ ಜತೆ ಸೇರಿಕೊಂಡರು. ಮೊಂಬಾಸಾದ ವಿದ್ಯಾರ್ಥಿಗಳಲ್ಲಿ ವೈಷ್ಣವ ಸಂಸ್ಕೃತಿಯನ್ನು ಹರಡಲು 2021ರಲ್ಲಿ ಸ್ಥಾಪಿಸಲಾದ ವಿಶ್ವವಿದ್ಯಾಲಯ ಆಧಾರಿತ ಉಪಕ್ರಮವಾದ ದಿ ಬೆಟರ್ ಯು ಕ್ಲಬ್‌ನ ಅಧ್ಯಕ್ಷರಾಗಿ, ಕ್ಯಾಲೆಬ್ ಕ್ಲಬ್ ಅನ್ನು 180 ಸದಸ್ಯರನ್ನು ಬೆಳೆಸಲು ಸಹಾಯ ಮಾಡಿದ್ದಾರೆ.

ವಿಧಾನಸಭೆಯ ಸದಸ್ಯರ ಸಮ್ಮುಖದಲ್ಲಿ ಕ್ಯಾಲೆಬ್ ಅವರು ಭಗವದ್ಗೀತೆ ಆ್ಯಸ್ ಇಟ್ ಈಸ್ ಪುಸ್ತಕವನ್ನು ಎತ್ತಿ ಪ್ರಮಾಣ ವಚನ ಸ್ವೀಕರಿಸಿದರು. ಮೊಂಬಾಸಾ ಯುವ ಅಸೆಂಬ್ಲಿ ಕೀನ್ಯಾ ಯುವ ಅಸೆಂಬ್ಲಿ ಚೌಕಟ್ಟಿನಡಿಯಲ್ಲಿ ಕಾರ್ಯನಿರ್ವಹಿಸುತ್ತದೆ. ಇದು ಯುವ ನಾಯಕರಿಗೆ ಔಪಚಾರಿಕ ರಾಜಕೀಯಕ್ಕೆ ಮುಂಚೆ ಜವಾಬ್ದಾರಿಯನ್ನು ಅಭ್ಯಾಸ ಮಾಡುವ ವೇದಿಕೆಯಾಗಿದೆ.


ಈ ಮೊದಲು ಕೆನಡಾದ ವಿದೇಶಾಂಗ ಸಚಿವೆಯಾದ ಅನಿತಾ ಆನಂದ್ ಭಗವದ್ಗೀತೆ ಹಿಡಿದು ಪ್ರಮಾಣವಚನ ಸ್ವೀಕರಿಸಿದ್ದರು. ಇನ್ನು ಅಮೆರಿಕದಲ್ಲಿ ಕಾಶ್ ಪಟೇಲ್ ಎಫ್‌ಬಿಐ ಡೈರೆಕ್ಟರ್ ಆದ ಬಳಿಕ ಅವರೂ ಕೂಡ ಭಗವದ್ಗೀತೆ ಹಿಡಿದು ಪ್ರಮಾಣವಚನ ಸ್ವೀಕರಿಸಿದ್ದರು. ಇಂಡಿಯನ್ ಆಸ್ಟ್ರೇಲಿಯನ್ ಸಂಸದ ವರುಣ್ ಘೋಷ್ ಕೂಡ ಹೀಗೆಯೇ ಮಾಡಿದ್ದರು. ಆದರೆ ಅವರೆಲ್ಲರೂ ಮೂಲತಃ ಭಾರತೀಯರಾಗಿದ್ದರು.

## ಸುಪ್ರೀಂಕೋರ್ಟ್ ಕ್ಷಮೆಯಾಚಿಸಿದ ಎನ್‌ಸಿಇಆರ್‌ಟಿ

**ನವದೆಹಲಿ:** ಎಂಟನೇ ತರಗತಿಯ ಪಠ್ಯಪುಸ್ತಕದಲ್ಲಿ ನ್ಯಾಯಾಂಗ ಭ್ರಷ್ಟಾಚಾರದ ಬಗ್ಗೆ ಮಾತನಾಡುವ ಅಧ್ಯಾಯದ ಬಗ್ಗೆ ಸುಪ್ರೀಂ ಕೋರ್ಟ್‌ನ ಕೋಪವನ್ನು ಎದುರಿಸಿದ ನಂತರ ಎನ್‌ಸಿಇಆರ್‌ಟಿ ಅನುಚಿತ ವಿಷಯಕ್ಕಾಗಿ ಕ್ಷಮೆಯಾಚಿಸಿದೆ, ಸಂಬಂಧಿತ ಪುಸ್ತಕ ಅನ್ನು ಸೂಕ್ತ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಪುನಃ ಬರೆಯಲಾ ಗುವುದು ಎಂದು ಹೇಳಿದೆ.

ಶಾಲಾ ಶಿಕ್ಷಣ ಪಠ್ಯಕ್ರಮದ ಜವಾಬ್ದಾರಿಯನ್ನು ಹೊಂದಿರುವ ಮಂಡಳಿಯು, ಪುಸ್ತಕವನ್ನು ತನ್ನ ವೆಬ್‌ಸೈಟ್‌ನಿಂದ ತೆಗೆದುಹಾಕಿದ ಕೆಲವೇ ಗಂಟೆಗಳ ನಂತರ ಪಠ್ಯಪುಸ್ತಕದ ಪ್ರಸರಣವನ್ನು ತಡೆಹಿಡಿದಿದೆ. ಕೆಲವು ಅನುಚಿತ ಪಠ್ಯ ಸಾಮಗ್ರಿಗಳು, ತೀರ್ಪಿನ ದೋಷವು ಅಜಾಗರೂಕತೆಯಿಂದ ಸಂಬಂಧಿತ ಅಧ್ಯಾಯಕ್ಕೆ ನುಸುಳಿದೆ ಎಂದು ಗಮನಿಸಲಾಗಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಶನಲ್ ರಿಸರ್ಚ್ ಟ್ರೈನಿಂಗ್ ನ್ಯಾಯಾಂಗವನ್ನು ಅತ್ಯಂತ ಗೌರವದಿಂದ ಹೊಂದಿದೆ, ಅದನ್ನು ಭಾರತೀಯ ಸಂವಿಧಾನದ ರಕ್ಷಕ, ಮೂಲಭೂತ ಹಕ್ಕುಗಳ ರಕ್ಷಕ ಎಂದು ಪರಿಗಣಿಸುತ್ತದೆ ಎಂದು ಹೇಳಿದೆ, ದೋಷವನ್ನು ಸಂಪೂರ್ಣವಾಗಿ ಉದ್ದೇಶಪೂರ್ವಕವಲ್ಲ ಎಂದು ಹೇಳಿದೆ. ಹೊಸ ಪಠ್ಯಪುಸ್ತಕಗಳ ಉದ್ದೇಶವು ಸಾಂವಿಧಾನಿಕ ಸಾಕ್ಷರತೆ, ಸಾಂಸ್ಥಿಕ ಗೌರವ, ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ಭಾಗವಹಿಸುವಿಕೆಯ ತಿಳುವಳಿಕೆಯನ್ನು ಬಲಪಡಿಸುವುದು ಎಂದು ಎನ್‌ಸಿಇಆರ್‌ಟಿ ಪುನರುಚ್ಚರಿಸುತ್ತದೆ. ಯಾವುದೇ ಸಾಂವಿಧಾನಿಕ ಸಂಸ್ಥೆಯ ಅಧಿಕಾರವನ್ನು ಪ್ರಶ್ನಿಸುವ, ಕಡಿಮೆ ಮಾಡುವ ಉದ್ದೇಶವಿಲ್ಲ ಎಂದು ಅವರು ಹೇಳಿದರು.

ತನ್ನ ನಿರಂತರ ಪರಿಶೀಲನಾ ಪ್ರಕ್ರಿಯೆಯ ಭಾಗವಾಗಿ, ರಚನಾತ್ಮಕ ಪ್ರತಿಕ್ರಿಯೆಗೆ ಮುಕ್ತವಾಗಿದೆ. ಆದ್ದರಿಂದ, ಅಗತ್ಯವಿದ್ದಲ್ಲಿ




ಸೂಕ್ತ ಪ್ರಾಧಿಕಾರದ ಸಮಾಲೋಚನೆಯೊಂದಿಗೆ ಅದನ್ನು ಪುನಃ ಬರೆಯಲಾಗುವುದು, 2026-27ರ ಶೈಕ್ಷಣಿಕ ಅಧಿವೇಶನದ ಪ್ರಾರಂಭದ ನಂತರ 8 ನೇ ತರಗತಿಯ ವಿದ್ಯಾರ್ಥಿಗಳಿಗೆ ಲಭ್ಯವಾಗುವಂತೆ ಮಾಡಲಾಗುವುದು ಎಂದು ಅದು ಹೇಳಿದೆ. ಹಿರಿಯ ವಕೀಲ ಕಪಿಲ್ ಸಿಬಲ್, ಅಭಿಷೇಕ್ ಸಿಂಘ್ವಿ ಅವರು ಪಠ್ಯಪುಸ್ತಕಗಳಲ್ಲಿ ನ್ಯಾಯಾಂಗದ ಬಗ್ಗೆ ಆಕ್ಷೇಪಾರ್ಹ ಹೇಳಿಕೆಗಳನ್ನು ತುರ್ತು ಪರಿಗಣನೆಗೆ ಪ್ರಸ್ತಾಪಿಸಿದ ನಂತರ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜೋಯ್ಮಲ್ಯ ಬಾಗ್ಚಿ ವಿಪುಲ್ ಎಂ ಪಾಂಚೋಲಿ ಅವರನ್ನು ಒಳಗೊಂಡ ಮೂವರು ನ್ಯಾಯಾಧೀಶರ ಪೀಠವು ಸ್ವಯಂ ಪ್ರೇರಿತವಾಗಿ ವಿಚಾರಣೆಗೆ ತೆಗೆದುಕೊಂಡಿದೆ. 8ನೇ ತರಗತಿಯ ಪಠ್ಯಕ್ರಮದಲ್ಲಿ ನ್ಯಾಯಾಂಗ ಭ್ರಷ್ಟಾಚಾರದ ಕುರಿತಾದ ಅಧ್ಯಾಯವನ್ನು ಸಿಜೆಐ ಕಾಂತ್ ತೀವ್ರವಾಗಿ ಆಕ್ಷೇಪಿಸಿದರು, ನ್ಯಾಯಾಂಗವನ್ನು ದೂಷಿಸಲು, ಅದರ ಸಮಗ್ರತೆಯನ್ನು ಕಳಂಕಗೊಳಿಸಲು ಭೂಮಿಯಲ್ಲಿ ಯಾರಿಗೂ ಅವಕಾಶ ನೀಡಲಾಗುವುದಿಲ್ಲ ಎಂದು ಹೇಳಿದರು.

8ನೇ ತರಗತಿಯ ಹೊಸ ಸಮಾಜ ವಿಜ್ಞಾನ ಪಠ್ಯಪುಸ್ತಕಗಳು ಭ್ರಷ್ಟಾಚಾರ, ಬೃಹತ್ ಪ್ರಕರಣಗಳ ಬಾಕಿ ಮತ್ತು ಸಾಕಷ್ಟು ಸಂಖ್ಯೆಯ ನ್ಯಾಯಾಧೀಶರ ಕೊರತೆ ನ್ಯಾಯಾಂಗ ವ್ಯವಸ್ಥೆ ಎದುರಿಸುತ್ತಿರುವ ಸವಾಲುಗಳಲ್ಲಿ ಸೇರಿವೆ ಎಂದು ಹೇಳುತ್ತವೆ.

## ದೆಹಲಿ ಪೊಲೀಸರನ್ನು ಬಂಧಿಸಿದ ಶಿಮ್ಲಾ ಪೊಲೀಸರು

**ಶಿಮ್ಲಾ:** ಹಿಮಾಚಲ ಪ್ರದೇಶಕ್ಕೆ ಆಗಮಿಸಿದ್ದ 20 ದೆಹಲಿ ಪೊಲೀಸ್ ಸಿಬ್ಬಂದಿಯನ್ನು ಶಿಮ್ಲಾ ಪೊಲೀಸರು ಬಂಧಿಸಿರುವ ಘಟನೆ ನಡೆದಿದೆ. ಈ ಘಟನೆ ರಾಜಕೀಯ, ಆಡಳಿತ ವಲಯದಲ್ಲಿ ಕೋಲಾಹಲವನ್ನು ಸೃಷ್ಟಿಸಿದೆ.

ಎಐ ಇಂಪ್ಯಾಕ್ಟ್ ಶೃಂಗಸಭೆಯಲ್ಲಿ ಶರ್ಟ್ ಬಿಚ್ಚಿ ಪ್ರತಿಭಟನೆ ಮಾಡಿದ್ದ ಯುವ ಕಾಂಗ್ರೆಸ್ ಕಾರ್ಯಕರ್ತರ ಪೈಕಿ ಮೂವರನ್ನು ಹಿಡಿಯಲು ದೆಹಲಿ ಪೊಲೀಸರು ಹಿಮಾಚಲ ಪ್ರದೇಶಕ್ಕೆ ತೆರಳಿದಾಗ ಈ ಘಟನೆ ನಡೆದಿದೆ.

ಈ ಸಂಪೂರ್ಣ ಘಟನೆಯು ಚಂಡೀಗಢ-ಕಲ್ಕಾ-ಶಿಮ್ಲಾ ಹೆದ್ದಾರಿಯಲ್ಲಿ ನಡೆಯಿತು, ಎರಡೂ ರಾಜ್ಯಗಳ ಪೊಲೀಸರು ಇಲ್ಲಿ ಮುಖಾಮುಖಿ ಆದರು. ಈ ಶೃಂಗಸಭೆಯ ಸಮಯದಲ್ಲಿ, ಮೂವರು ಯುವ ಕಾಂಗ್ರೆಸ್ ಕಾರ್ಯಕರ್ತರು ಶರ್ಟ್ ಧರಿಸದೆ ಪ್ರತಿಭಟನೆ ನಡೆಸಿದರು.

ಪ್ರತಿಭಟನೆಯ ನಂತರ, ಮೂವರು ಕಾರ್ಯಕರ್ತರು ಶಿಮ್ಲಾ ಜಿಲ್ಲೆಯ ರೋಹ್ರು ಪ್ರದೇಶಕ್ಕೆ ಹೋಗಿ ಸ್ಥಳೀಯ ಹೋಟೆಲ್‌ನಲ್ಲಿ ತಂಗಿದ್ದರು ಎಂದು ವರದಿಯಾಗಿದೆ. ದೆಹಲಿ ಪೊಲೀಸರು ಅವರ ಸ್ಥಳದ ಬಗ್ಗೆ ತಿಳಿದುಕೊಂಡು, ಒಂದು ತಂಡ ರೋಹ್ರುಗೆ ಆಗಮಿಸಿತು.ಈ ಕಾರ್ಯಾಚರಣೆಯ ಬಗ್ಗೆ ಸೋಲನ್‌ಪೊಲೀಸರು ತಿಳಿದ ತಕ್ಷಣ, ಅವರು ತಕ್ಷಣ ಕ್ರಮ ಕೈಗೊಂಡರು. ಧರ್ಮಪುರ ಬಳಿಯ ಚಂಡೀಗಢ-ಕಲ್ಕಾ-ಶಿಮ್ಲಾ ಹೆದ್ದಾರಿಯಲ್ಲಿ



ಬ್ಯಾರಿಕೇಡ್‌ಗಳನ್ನು ನಿರ್ಮಿಸಿ ದಿಗ್ಬಂಧನ ಹಾಕಲಾಯಿತು.

ಸೋಲನ್ ಪೊಲೀಸರು ದೆಹಲಿ ಪೊಲೀಸ್ ತಂಡವನ್ನು ಇಲ್ಲಿಯೇ ತಡೆದರು. ಇದಲ್ಲದೆ, 20 ದೆಹಲಿ ಪೊಲೀಸ್ ಸಿಬ್ಬಂದಿಯನ್ನು ಬಂಧಿಸಲಾಯಿತು. ಇದು ಪರಿಸ್ಥಿತಿಯನ್ನು ಉಲ್ಬಣಗೊಳಿಸಿತು ಮತ್ತು ಎರಡೂ ರಾಜ್ಯಗಳ ಪೊಲೀಸರ ನಡುವೆ ಘರ್ಷಣೆಗೆ ಕಾರಣವಾಗಿದೆ.

ಬಂಧಿತ ಮೂವರು ಯುವ ಕಾಂಗ್ರೆಸ್ ಕಾರ್ಯಕರ್ತರನ್ನು ಶಿಮ್ಲಾ ಜಿಲ್ಲಾ ನ್ಯಾಯಾಲಯದ ಮುಂದೆ ಹಾಜರುಪಡಿಸಲಾಯಿತು. ಅವರನ್ನು ಎಸಿಜೆಎಂ ನ್ಯಾಯಾಲಯ ಸಂಖ್ಯೆ 2ಕ್ಕೆ ಕರೆ ತರಲಾಯಿತು. ವಿಚಾರಣೆಯ ಸಮಯದಲ್ಲಿ ದೆಹಲಿ ಪೊಲೀಸ್ ಅಧಿಕಾರಿಗಳು, ಸಿಬ್ಬಂದಿ ಕೂಡ ಹಾಜರಿದ್ದರು. ಮೂವರು ಆರೋಪಿಗಳನ್ನು ಸಾಗಿಸುತ್ತಿದ್ದಾಗ ದೆಹಲಿ ಪೊಲೀಸ್ ತಂಡವನ್ನು ಶಿಮ್ಲಾ ಪೊಲೀಸರು ತಡೆದಾಗ ಈ ವಾಗ್ವಾದ ನಡೆಯಿತು.

ಶಿಮ್ಲಾ ಪೊಲೀಸರು ದೆಹಲಿ ಪೊಲೀಸ್ ಸಿಬ್ಬಂದಿ ವಿರುದ್ಧ ಅಪಹರಣ ಪ್ರಕರಣವನ್ನು ದಾಖಲಿಸಿದ್ದು, ಅವರ ವಾಹನಗಳನ್ನು ವಶಕ್ಕೆ ಪಡೆದಿದ್ದರು.ಈ ಬಗ್ಗೆ ಭಾರತೀಯ ಜನತಾ ಪಕ್ಷ ಕಾಂಗ್ರೆಸ್ ನೇತೃತ್ವದ ಹಿಮಾಚಲ ಪ್ರದೇಶ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದು, ದೇಶದ ಮಾನ ಹಾಳು ಮಾಡಲು ಪ್ರಯತ್ನಿಸಿದವರಿಗೆ ರಕ್ಷಣೆ ನೀಡುವುದು ನಾಚಿಕೆಗೇಡಿನ ಸಂಗತಿ ಎಂದು ಮಾಜಿ ಮುಖ್ಯಮಂತ್ರಿ ಜೈ ರಾಮ್ ಠಾಕೂರ್ ಹೇಳಿದ್ದಾರೆ. ಫೆಬ್ರವರಿ 20ರಂದು ಭಾರತ್ ಮಂಟಪ್‌ನಲ್ಲಿ ನಡೆಯುತ್ತಿದ್ದ ಎಐ ಶೃಂಗಸಭೆ ವೇಳೆ ಕಾಂಗ್ರೆಸ್ ಕಾರ್ಯಕರ್ತರು ಶರ್ಟ್ ತೆಗೆದು ಪ್ರತಿಭಟನೆ ನಡೆಸಿದ್ದರು. ದೆಹಲಿ ಪೊಲೀಸರು ಇದುವರೆಗೆ ಭಾರತೀಯ ಯುವ ಕಾಂಗ್ರೆಸ್ ಅಧ್ಯಕ್ಷ ಉದಯ್ ಭಾನು ಚಿಬ್ ಸೇರಿದಂತೆ 11 ಜನರನ್ನು ಬಂಧಿಸಿದ್ದಾರೆ.

## ಭಯೋತ್ಪಾದನೆ ನಿಗ್ರಹಕ್ಕೆ ಭಾರತ-ಇಸ್ರೇಲ್ ರಕ್ಷಣಾ ಪಾಲುದಾರಿಕೆ

**ಟೆಲ್‌ಅವೀವ್:** ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಜೊತೆ ರಕ್ಷಣಾ, ವ್ಯಾಪಾರ ಮತ್ತು ಭಯೋತ್ಪಾದನಾ ನಿಗ್ರಹ ಸಂಬಂಧಗಳನ್ನು ಬಲಪಡಿಸುವುದಾಗಿ ಘೋಷಿಸಿದ್ದಾರೆ. ಈ ಒಪ್ಪಂದ ಉಭಯ ರಾಷ್ಟ್ರಗಳ ನಡುವಿನ ರಕ್ಷಣಾ ಸಂಬಂಧಗಳು ಪಾಲುದಾರಿಕೆಯ ಪ್ರಮುಖ ಆಧಾರಸ್ತಂಭ ಎಂದು ಪ್ರಧಾನಿ ಮೋದಿ ಅವರು ಒಂಬತ್ತು ವರ್ಷಗಳಲ್ಲಿ ಮೊದಲ ಬಾರಿಗೆ ಟೆಲ್ ಅವೀವ್‌ಗೆ ಆಗಮಿಸಿದ ನಂತರ ಅವರು ಇಸ್ರೇಲ್ ಸಂಸತ್ತಿನ ನೆಸೆಟ್‌ನಲ್ಲಿ ಮಾಡಿದ ಭಾಷಣದಲ್ಲಿ ಹೇಳಿದರು.

ಬೆಂಜಮಿನ್ ನೆತನ್ಯಾಹು ವ್ಯಾಪಾರವನ್ನು ವಿಸ್ತರಿಸಲು, ಹೂಡಿಕೆ ಹರಿವನ್ನು ಬಲಪಡಿಸಲು. ಜಂಟಿ ಮೂಲಸೌಕರ್ಯ ಅಭಿವೃದ್ಧಿಯನ್ನು ಉತ್ತೇಜಿಸಲು ಬದ್ಧರಾಗಿದ್ದಾರೆ ಎಂದು ಪ್ರಧಾನಿ ಮೋದಿ ಹೇಳಿದರು, ಕಳೆದ ವರ್ಷದ ಗಾಜಾ ಯುದ್ಧದಲ್ಲಿ ಕದನ ವಿರಾಮವು ಹೆಚ್ಚು ನಿಕಟವಾಗಿ ಸಹಕರಿಸಲು ಒಂದು ಮಾರ್ಗವನ್ನು ಸೃಷ್ಟಿಸುತ್ತದೆ ಎಂದು ಉಲ್ಲೇಖಿಸಿದರು. ಇಂದಿನ ಅನಿಶ್ಚಿತ ಜಗತ್ತಿನಲ್ಲಿ, ಭಾರತ ಇಸ್ರೇಲ್‌ನಂತಹ ವಿಶ್ವಾಸಾರ್ಹ ಪಾಲುದಾರರ ನಡುವೆ ಬಲವಾದ ರಕ್ಷಣಾ ಪಾಲುದಾರಿಕೆ ಅತ್ಯಗತ್ಯ ಎಂದು ಅವರು ಹೇಳಿದರು. ಪ್ರಧಾನಿ ಮೋದಿ ಅವರು ಭೇಟಿಯ ಭಾಗವಾಗಿ ಇಸ್ರೇಲ್ ನಿರ್ಮಿತ ಕ್ಷಿಪಣಿ ವ್ಯವಸ್ಥೆಗಳಿಗೆ ಪ್ರಮುಖ ಆದೇಶವನ್ನು ಅಂತಿಮಗೊಳಿಸುವ



ನಿರೀಕ್ಷೆಯಿದೆ, ಈ ವಿಷಯದ ಬಗ್ಗೆ ಪರಿಚಿತವಾಗಿರುವ ನವದೆಹಲಿಯ ಅಧಿಕಾರಿಯೊಬ್ಬರು, ಚರ್ಚೆಗಳು ಖಾಸಗಿಯಾಗಿರುವುದರಿಂದ ಗುರುತಿಸದಿರಲು ಕೇಳಿದ್ದಾರೆ. ಒಪ್ಪಂದದ ನಿರ್ದಿಷ್ಟ ವಿವರಗಳನ್ನು ಸಾರ್ವಜನಿಕವಾಗಿ ಬಿಡುಗಡೆ ಮಾಡುವ ಸಾಧ್ಯತೆ ಕಡಿಮೆ, ಏಕೆಂದರೆ ಎರಡೂ ಕಡೆಯವರು ತಮ್ಮ ವಿಶಾಲ ಸಂಬಂಧಗಳ ಮೇಲೆ ಪ್ರವಾಸದ ಗಮನವನ್ನು ಇಟ್ಟುಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಭಾರತದ ವಿದೇಶಾಂಗ ಸಚಿವಾಲಯವು ಆದೇಶದ ಕುರಿತು ಪ್ರತಿಕ್ರಿಯೆಗಾಗಿ ವಿನಂತಿಗೆ ತಕ್ಷಣ ಪ್ರತಿಕ್ರಿಯಿಸಲಿಲ್ಲ. ದಶಕಗಳ ಹಿಂದಿನಿಂದ ಭಾರತದ ಅತಿದೊಡ್ಡ ಶಸ್ತ್ರಾಸ್ತ್ರ ಪೂರೈಕೆದಾರರಲ್ಲಿ ಇಸ್ರೇಲ್ ಒಂದಾಗಿದ್ದು, ರಕ್ಷಣಾ ಸಂಬಂಧವು ಕಾಲಾನಂತರದಲ್ಲಿ ಎರಡೂ ದೇಶಗಳು ಈಗ ಜಂಟಿಯಾಗಿ ಡ್ರೋನ್‌ಗಳು ಮತ್ತು ಕ್ಷಿಪಣಿಗಳಂತಹ ಉಪಕರಣಗಳನ್ನು ತಯಾರಿಸುವ ಒಂದಕ್ಕೆ ವಿಕಸನಗೊಳ್ಳುತ್ತಿದೆ. ಪ್ರಧಾನಿ ಮೋದಿ ಅವರ ಪ್ರವಾಸಕ್ಕೂ ಮುನ್ನ, ಭಾರತದಲ್ಲಿನ ಇಸ್ರೇಲ್ ರಾಯಭಾರಿ ರುವೆನ್ ಅಜರ್ ಅವರು ಎರಡೂ ಕಡೆಯವರು ಆಳವಾದ ರಕ್ಷಣಾ. ಭದ್ರತಾ ಒಪ್ಪಂದವನ್ನು ಬಯಸುತ್ತಿದ್ದಾರೆ, ಇದು ಹೆಚ್ಚು ಸೂಕ್ಷ್ಮ ಯೋಜನೆಗಳ ಕುರಿತು ಸಹಕಾರಕ್ಕೆ ಅವಕಾಶ ನೀಡುತ್ತದೆ ಎಂದು ಹೇಳಿದರು.

2024ರಲ್ಲಿ ಸತತ ಮೂರನೇ ಚುನಾವಣೆಯಲ್ಲಿ ಗೆದ್ದ ಹಿಂದೂ ರಾಷ್ಟ್ರೀಯತಾವಾದಿ ಪಕ್ಷವಾದ ಪ್ರಧಾನಿ ಮೋದಿ, ಇಸ್ರೇಲ್‌ನ ಕಟ್ಟಾ ಬೆಂಬಲಿಗರಾಗಿದ್ದು, ನೆತನ್ಯಾಹು ಅವರೊಂದಿಗೆ ನಿಕಟ ವೈಯಕ್ತಿಕ ಸಂಬಂಧವನ್ನು ಹಂಚಿಕೊಂಡಿದ್ದಾರೆ, ಆಗಾಗ್ಗೆ ಅವರನ್ನು ಸ್ನೇಹಿತ ಎಂದು ಉಲ್ಲೇಖಿಸುತ್ತಾರೆ. ಅವರು ಆ ಸಂಬಂಧಗಳಿಗೆ ನಿಷ್ಠರಾಗಿ ಉಳಿದಿದ್ದಾರೆ, ಆದರೆ ಗಾಜಾದಲ್ಲಿನ ಯುದ್ಧದ ಮಾನವೀಯ ಪ್ರಭಾವದಿಂದಾಗಿ ಇಸ್ರೇಲ್‌ನ ಇತರ ಮಿತ್ರರಾಷ್ಟ್ರಗಳೊಂದಿಗಿನ ಸಂಬಂಧಗಳು ಬಿಕ್ಕಟ್ಟಿಗೆ ಸಿಲುಕಿದವು.

ಅಮೆರಿಕ ಮಧ್ಯಸ್ಥಿಕೆಯ ಗಾಜಾ ಶಾಂತಿ ಯೋಜನೆ, ನಂತರ ವಿಶ್ವಸಂಸ್ಥೆಯಿಂದ ಅನುಮೋದಿಸಲ್ಪಟ್ಟಿತು, ಪ್ಯಾಲೆಸ್ಟೈನ್‌ಸಮಸ್ಯೆಯನ್ನು ಪರಿಹರಿಸುವ ಮೂಲಕ ಸೇರಿದಂತೆ ಈ ಪ್ರದೇಶದ ಎಲ್ಲಾ ಜನರಿಗೆ ನ್ಯಾಯಯುತ. ಶಾಶ್ವತ ಶಾಂತಿಯ ಭರವಸೆಯನ್ನು ಹೊಂದಿದೆ ಎಂದು ಪ್ರಧಾನಿ ಮೋದಿ ಹೇಳಿದರು.ಆದಾಗ್ಯೂ, ಹಮಾಸ್‌ನೊಂದಿಗಿನ ಕದನ ವಿರಾಮದ ಭವಿಷ್ಯವು ಅನಿಶ್ಚಿತವಾಗಿಯೇ ಉಳಿದಿದೆ, ಗುಂಪು ಇನ್ನೂ ಶಸ್ತ್ರಾಸ್ತ್ರ ಮತ್ತು ಭವಿಷ್ಯದ ಆಡಳಿತ ಮತ್ತು ಭದ್ರತಾ ಉಪಕ್ರಮಗಳನ್ನು ಹೊಸ ಹಂತದಲ್ಲಿ ತ್ಯಜಿಸಿಲ್ಲ. ಈ ಪ್ರದೇಶದಲ್ಲಿ ತಮ್ಮ ಪ್ರತಿಸ್ಪರ್ಧಿಗಳು ನಿಕಟ ಮೈತ್ರಿಗಳನ್ನು ರೂಪಿಸುತ್ತಿರುವ ಸಮಯದಲ್ಲಿ ಇಸ್ರೇಲ್. ಭಾರತ ತಮ್ಮ ಬಂಧಗಳನ್ನು ಬಲಪಡಿಸುತ್ತಿವೆ.

ಭಾರತವು ವರ್ಷಗಳಲ್ಲಿ ಹಲವಾರು ಬಾರಿ ಘರ್ಷಣೆ ಮಾಡಿರುವ ಪರಮಾಣು ಶಸ್ತ್ರಸಜ್ಜಿತ ರಾಷ್ಟ್ರವಾದ ಪಾಕಿಸ್ತಾನವು ಸೌದಿ ಅರೇಬಿಯಾದೊಂದಿಗೆ ಪರಸ್ಪರ ರಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿದೆ. ಟರ್ಕಿ ಆ ರಕ್ಷಣಾ ಮೈತ್ರಿಕೂಟಕ್ಕೆ ಸೇರಲು ಪ್ರಯತ್ನಿಸುತ್ತಿದೆ ಎಂದು ಈ ವಿಷಯದ ಬಗ್ಗೆ ತಿಳಿದಿರುವ ಜನರು ಕಳೆದ ತಿಂಗಳು ಹೇಳಿದ್ದರು, ಇದು ಉದ್ವಿಗ್ನ ಪ್ರದೇಶದಲ್ಲಿ ಅಧಿಕಾರದ ಸಮತೋಲನವನ್ನು ಮತ್ತಷ್ಟು ಬದಲಾಯಿಸುವ ಒಂದು ಕ್ರಮವಾಗಿದೆ.

## ಮಿನಿ ನ್ಯೂಸ್

### ಪರಮಾಣು: ಅಮೆರಿಕ- ಇರಾನ್ ಮಾತುಕತೆ ಆರಂಭ

**ಜಿನೀವಾ:** ಪರಮಾಣು ಕಾರ್ಯಕ್ರಮದ ಕುರಿತು ಇರಾನ್, ಅಮೆರಿಕ ಗುರುವಾರ ಜಿನೀವಾದಲ್ಲಿ ಮಾತುಕತೆ ಆರಂಭಿಸಿದವು. ಅಮೆರಿಕ ಜೊತೆಗೆ ಇರಾನ್ ಮಾತುಕತೆಯ ಮಧ್ಯಸ್ಥಿಕೆ ವಹಿಸಿರುವ ಒಮಾನ್‌ನ ವಿದೇಶಾಂಗ ಸಚಿವ ಬದ್-ಅಲ್-ಬುಸೈದಿ ಅವರು ಅಮೆರಿಕದ ವಿಶೇಷ ಪ್ರತಿನಿಧಿಗಳಾದ ಸ್ಟೀವ್ ವಿಟ್‌ಕಾಫ್, ಜೇರೆಡ್ ಕುಶ್ನರ್ ಅವರೊಂದಿಗೆ ಚರ್ಚಿಸಿದರು.ಇದು ಉಭಯ ದೇಶಗಳ ನಡುವಿನ ಮೂರನೇ ಸುತ್ತಿನ ಮಾತುಕತೆಯಾಗಿದೆ. ಪರಮಾಣು ಒಪ್ಪಂದ ಮಾಡಿಕೊಳ್ಳುವಂತೆ ಅಮೆರಿಕವು ಇರಾನ್ ಮೇಲೆ ಒತ್ತಡ ಹೇರಲು ಮಧ್ಯಪ್ರಾಚ್ಯದಲ್ಲಿ ಯುದ್ಧ ವಿಮಾನ, ಯುದ್ಧನೌಕೆಗಳನ್ನು ನಿಯೋಜಿಸಿರುವುದರಿಂದ, ಇದನ್ನು ರಾಜತಾಂತ್ರಿಕತೆಯ ಕೊನೆಯ ಅವಕಾಶ ಎಂದು ಪರಿಗಣಿಸಲಾಗಿದೆ. ಡೊನಾಲ್ಡ್ ಟ್ರಂಪ್ ಅವರು ಇರಾನ್‌ನ ಪರಮಾಣು ಕಾರ್ಯಕ್ರಮವನ್ನು ನಿರ್ಬಂಧಿಸುವ ಉದ್ದೇಶದಿಂದ ಒಪ್ಪಂದ ಮಾಡಿಕೊಳ್ಳಲು ಬಯಸಿದ್ದಾರೆ. ಕಳೆದ ತಿಂಗಳು ಇರಾನ್ ದೇಶದಾದ್ಯಂತ ನಡೆದ ಪ್ರತಿಭಟನೆಗಳ ನಂತರ ಆಂತರಿಕ ಸಂಘರ್ಷ ಭುಗಿಲೆದ್ದಿದೆ. ಈ ಪರಿಸ್ಥಿತಿಯನ್ನು ಟ್ರಂಪ್ ಅವರು ಒಂದು ಅವಕಾಶವಾಗಿ ನೋಡುತ್ತಿದ್ದಾರೆ. ಕಳೆದ ವರ್ಷ ನಡೆದ 12 ದಿನಗಳ ಯುದ್ಧದ ಭಾಗವಾಗಿ ಜೂನ್‌ನಲ್ಲಿ ಟ್ರಂಪ್ ಅವರು ಇರಾನ್‌ನ ಮೂರು ಪರಮಾಣು ನೆಲೆಗಳ ಮೇಲೆ ದಾಳಿ ನಡೆಸಿದ ನಂತರ ಪರಮಾಣು ಒಪ್ಪಂದ ವಿಫಲವಾಗಿತ್ತು. ಆದರೂ ಯುರೇನಿಯಂ ಸಂಗ್ರಹವನ್ನು ಹೆಚ್ಚಿಸಲು ಬಯಸುವುದಾಗಿ ಇರಾನ್ ಪ್ರತಿಪಾದಿಸಿತ್ತು. ಅಮೆರಿಕ ದಾಳಿ ನಡೆಸಿದರೆ, ಮಧ್ಯಪ್ರಾಚ್ಯದಲ್ಲಿರುವ ಅದರ ಎಲ್ಲಾ ಸೇನಾನೆಲೆಗಳನ್ನು ಕಾನೂನುಬದ್ಧ ಗುರಿಗಳೆಂದು ಪರಿಗಣಿಸುವುದಾಗಿ ಇರಾನ್ ಹೇಳಿದೆ.

### 792 ಕೋಟಿ ರೂ. ಹೂಡಿಕೆ ಹಗರಣ ಫಾಲ್ಕನ್ ಗ್ರೂಪ್‌ನ ಮಾಜಿ ಸಿಇಒ ಬಂಧನ

**ಹೈದರಾಬಾದ್:** ಸುಮಾರು 792 ಕೋಟಿ ರೂ. ಠೇವಣಿ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಫಾಲ್ಕನ್ ಗ್ರೂಪ್‌ನ ಮಾಜಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ವಿಕಾಸ್ ಕುಮಾರ್ ಸಖಾರೆ ಅವರನ್ನು ತೆಲಂಗಾಣ ಸಿಐಡಿ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣವು ಅನಧಿಕೃತ ಠೇವಣಿ ಸಂಗ್ರಹಕ್ಕೆ ಸಂಬಂಧಿಸಿದೆ, ಇದರಲ್ಲಿ ಆರೋಪಿಗಳು ಫಾಲ್ಕನ್ ಇನ್‌ವಾಯ್ಸ್ ಡಿಸ್ಕೌಂಟಿಂಗ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸುವ ಮೂಲಕ ಠೇವಣಿದಾರರನ್ನು ವಂಚಿಸಿದರು ಮತ್ತು ಪ್ರತಿಷ್ಠಿತ ಬಹುರಾಷ್ಟ್ರೀಯ ಕಂಪನಿಗಳ ಹೆಸರಿನಲ್ಲಿ ನಕಲಿ ಒಪ್ಪಂದಗಳನ್ನು ಸೃಷ್ಟಿಸಿದರು ಎಂದು ಸಿಐಡಿ ಹೆಚ್ಚುವರಿ ಮಹಾನಿರ್ದೇಶಕ ಚಾರು ಸಿನ್ಹಾ ತಿಳಿಸಿದ್ದಾರೆ. ಹೆಚ್ಚಿನ ಬಡ್ಡಿದರಗಳ ನೆಪದಲ್ಲಿ ಠೇವಣಿದಾರರನ್ನು ಆಕರ್ಷಿಸಿದರು, 7,056 ಠೇವಣಿದಾರರಿಂದ ಸುಮಾರು 4,215 ಕೋಟಿ ರೂ.ಗಳನ್ನು ಸಂಗ್ರಹಿಸಿದರು. ಅದರಲ್ಲಿ, ಫಾಲ್ಕನ್ ಇನ್‌ವಾಯ್ಸ್ ಡಿಸ್ಕೌಂಟಿಂಗ್ ಅಪ್ಲಿಕೇಶನ್ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ಯಾಪಿಟಲ್ ಪ್ರೊಟೆಕ್ಷನ್ ಫೋರ್ಸ್ ಪ್ರೈವೇಟ್ ಲಿಮಿಟೆಡ್‌ನ 4,065 ಜನರಿಗೆ 792 ಕೋಟಿ ರೂ.ಗಳಷ್ಟು ವಂಚಿಸಿದೆ ಎಂದು ಮಾಹಿತಿ ನೀಡಿದ್ದಾರೆ.

ದೂರುಗಳ ಮೇರೆಗೆ, ಸೈಬರಾಬಾದ್ ಪೊಲೀಸ್ ಕಮಿಷನರೇಟ್‌ನ ಆರ್ಥಿಕ ಅಪರಾಧಗಳ ವಿಭಾಗದಲ್ಲಿ ಮೂರು ಪ್ರಕರಣಗಳನ್ನು ದಾಖಲಿಸಲಾಯಿತು ಮತ್ತು ನಂತರ ಹೆಚ್ಚಿನ ತನಿಖೆಗಾಗಿ ಸಿಐಡಿಗೆ ವರ್ಗಾಯಿಸಲಾಯಿತು. ದೇಶಾದ್ಯಂತ ಆರೋಪಿ ಕಂಪನಿ, ಅದರ ನಿರ್ದೇಶಕರ ವಿರುದ್ಧ ಇನ್ನೂ 10 ಪ್ರಕರಣಗಳನ್ನು ದಾಖಲಾಗಿದೆ. ಮೆಸರ್ಸ್ ಕ್ಯಾಪಿಟಲ್ ಪ್ರೊಟೆಕ್ಷನ್ ಫೋರ್ಸ್ ಕಂಪನಿ ಫಾಲ್ಕನ್ ಇನ್‌ವಾಯ್ಸ್ ಡಿಸ್ಕೌಂಟಿಂಗ್ ಅಪ್ಲಿಕೇಶನ್ ಅನ್ನು ಅಭಿವೃದ್ಧಿಪಡಿಸಿತು, ಸಾಮಾಜಿಕ ಮಾಧ್ಯಮ ವೇದಿಕೆಗಳ ಮೂಲಕ ಟೆಲಿಕಾಲ್ ಮಾಡುವವರ ಮೂಲಕ ಜಾಹೀರಾತು ನೀಡಿತು, ನಕಲಿ ಒಪ್ಪಂದಗಳನ್ನು ಸೃಷ್ಟಿಸಿತು, ಠೇವಣಿದಾರರಿಂದ ಕೋಟ್ಯಂತರ ರೂಪಾಯಿಗಳನ್ನು ಠೇವಣಿಗಳಾಗಿ ಸಂಗ್ರಹಿಸಿತು, ನಕಲಿ ಇನ್‌ವಾಯ್ಸ್ ರಶೀದಿಗಳು ಮತ್ತಿತರ ದಾಖಲೆ ನೀಡಿ ಸಾರ್ವಜನಿಕರನ್ನು ವಂಚಿಸಿತು. 2021 ರಿಂದ ಕಾರ್ಯನಿರ್ವಹಿಸುತ್ತಿರುವ ಆರೋಪಿಗಳು ಹಿಂದಿನ ಹೂಡಿಕೆದಾರರಿಗೆ ರಿಟರ್ನ್ಸ್ ಪಾವತಿಸಲು ನಿರಂತರವಾಗಿ ಹೊಸ ಠೇವಣಿದಾರರನ್ನು ನೇಮಿಸಿ ಕೊಂಡರು. ಜನವರಿ 15, 2025ರ ಹೊತ್ತಿಗೆ, ಯೋಜನೆ ಕುಸಿಯಿತು, ಭರವಸೆ ನೀಡಿದ ಆದಾಯವನ್ನು ಸ್ಥಗಿತಗೊಳಿಸಲಾಯಿತು, ಹೈದರಾಬಾದ್‌ನಲ್ಲಿರುವ ಕಚೇರಿಯನ್ನು ಮುಚ್ಚಲಾಗಿತ್ತು.

### ಪೊಲೀಸರ ಮುಂದೆ ಶರಣಾಗಲು ಬಯಸಿದ್ದ ಕಮಾಂಡರ್‌ನನ್ನು ಕೊಂದ ನಕ್ಸಲರು

**ಭುವನೇಶ್ವರ:** ಒಡಿಶಾ ಪೊಲೀಸರ ಮುಂದೆ ಶರಣಾಗಲು ಉದ್ದೇಶಿಸಿದ್ದಕ್ಕಾಗಿ ವಾಂಟೆಡ್ ಮಾವೋವಾದಿ ನಾಯಕನೊಬ್ಬ ತನ್ನ ಕಮಾಂಡರ್ ಅನ್ವೇಶ್‌ನನ್ನು ಕೊಂದಿದ್ದಾನೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಅನ್ವೇಶ್ ತಲೆಗೆ 22 ಲಕ್ಷ ರೂ. ಬಹುಮಾನ ನೀಡಲಾಗಿತ್ತು.ಕಂಧಮಲ್ ಜಿಲ್ಲೆಯ ಪೊಲೀಸರು ಡೇರಿಂಗ್‌ಬಾಡಿ ಪೊಲೀಸ್ ಠಾಣೆ ವ್ಯಾಪ್ತಿಯ ಪಕಾರಿ ಮೀಸಲು ಅರಣ್ಯ ಪ್ರದೇಶದಲ್ಲಿ ಅನ್ವೇಶ್ ಅಲಿಯಾಸ್ ರೇಣುವಿನ ಕೊಳೆತ ಶವವನ್ನು ಹೊರತೆಗೆದರು. ಜನವರಿ 29 ರಂದು ಕುಖ್ಯಾತ ನಕ್ಸಲ್ ನಾಯಕ ಸುಕ್ರು ಆತನನ್ನು ಕೊಂದಿದ್ದಾರೆ ಎಂದು ಆರೋಪಿಸಲಾಗಿದೆ.ಸುಕ್ರು, ಅವನ ಸಹಚರರು ಅನ್ವೇಶ್‌ನನ್ನು ಒಡಿಶಾ ಪೊಲೀಸರ ಮುಂದೆ ಶರಣಾಗಲು ಸಿದ್ಧರಾದಾಗ ಕಂಧಮಲ್ ಎಸ್‌ಪಿ ಹರೀಶ್ ಬಿ.ಸಿ. ಅವರನ್ನು ಕೊಂದಿದ್ದಾರೆ ಎಂದು ಖಚಿತವಾಗಿದೆ ಎಂದು ಕಂಧಮಲ್ ಎಸ್‌ಪಿ ಹರೀಶ್ ಬಿ.ಸಿ. ಪಿಟಿಐಗೆ ದೂರವಾಣಿ ಮೂಲಕ ತಿಳಿಸಿದ್ದಾರೆ. ನೆರೆಯ ಛತ್ತೀಸ್‌ಗಢದ ಸುಕ್ಮಾ ಮೂಲದ ಅನ್ವೇಶ್, ಕೆಕೆಬಿಎನ್ ವಿಭಾಗದ ವಿಭಾಗೀಯ ಸಮಿತಿ ಸದಸ್ಯ, ಮಿಲಿಟರಿ ಪ್ಲಟೂನ್ ಕಮಾಂಡರ್ ಆಗಿದ್ದರು, ಅವರ ತಲೆಗೆ 22 ಲಕ್ಷ ರೂ.ಗಳ ಬಹುಮಾನವನ್ನು ಹೊಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

## ರಾಷ್ಟ್ರೀಯ ಭದ್ರತೆಗೆ ಧಕ್ಕೆ ಎಂದು ಎಫ್‌ಬಿಐ ಕಿಡಿ

### ಚೀನಿ ವಾಯುಪಡೆಗೆ ರಹಸ್ಯ ತರಬೇತಿ ನೀಡುತ್ತಿದ್ದ ಯುಎಸ್‌ವಾಯುಪಡೆಯ ಮಾಜಿ ಮೇಜರ್ ಅರೆಸ್ಟ್

**ವಾಷಿಂಗ್ಟನ್:** ಅಮೆರಿಕ ಹಾಗೂ ಚೀನಾ ಎರಡು ಸಾವಿರಾರು ಮೈಲಿ ದೂರವಿದ್ದರೂ ಸಹ ಅವರ ನಡುವೆ ಹಸಿ ಹುಲ್ಲನ್ನು ತಂದಿಟ್ಟರೇ ಅದು ಸಹ ಬೆಂಕಿಗೆ ಆಹುತಿಯಾಗುವಂತಹ ದ್ವೇಷ ಉಭಯದಲ್ಲೂ ಇದೆ. ಅಷ್ಟರ ಮಟ್ಟಿಗೆ ಉಭಯದೇಶಗಳು ಒಬ್ಬರ ಮೇಲೊಬ್ಬರು ಕೆಂಡಕಾರುತ್ತಾರೆ. ಅದರಲ್ಲೂ ಮಿಲಿಟರಿ ಸಾಮರ್ಥ್ಯದಲ್ಲಿ ತಾನೇ ಎಲ್ಲರಿಗಿಂತಲೂ ಬಲಿಷ್ಠವಾಗಿರಬೇಕೆಂಬ ಹಂಬಲ. ಹೀಗಿರುವಾಗ ಮಿಲಿಟರಿ ಸಾಮರ್ಥ್ಯಗಳನ್ನು ತನ್ನ ವೈರಿ ದೇಶಕ್ಕೆ ಕಲಿಸಿಕೊಟ್ಟರೆ ಯಾವ ದೇಶ ತಾನೇ ಸುಮ್ಮನಿರುತ್ತೇ. ಅಂತಯೇ ಅಮೆರಿಕದ ಮಾಜಿ ಫೈಟರ್ ಪೈಲಟ್ ಒಬ್ಬರು ಚೀನಾದ ಮಿಲಿಟರಿ ಪೈಲಟ್‌ಗಳಿಗೆ ರಹಸ್ಯವಾಗಿ ತರಬೇತಿ ನೀಡಿ ಎಂಬ ಆರೋಪದಲ್ಲಿ ಯುಎಸ್ ಅಧಿಕಾರಿಗಳು ಅರೆಸ್ಟ್ ಮಾಡಿದ್ದಾರೆ.

**ಚೀನಿ ವಾಯುಪಡೆಗೆ ಯುಎಸ್ ಮಾಜಿ ಮಿಲಿಟರಿ ಅಧಿಕಾರಿಯ ರಹಸ್ಯ ತರಬೇತಿ:** ಅಮೆರಿಕದ ಮಾಜಿ ವಾಯುಪಡೆಯ ಮೇಜರ್, ಎಫ್ -35 ಲೈಟ್ನಿಂಗ್ II ರ ಟ್ರೇನರ್ ಪೈಲಟ್ ಆಗಿರುವ 65 ವರ್ಷದ ಜೆರಾಲ್ಡ್ ಬ್ರೌನ್ ಎಂಬಾತ ಅಮೆರಿಕದ ಅಧಿಕೃತ ಅನುಮತಿಯಿಲ್ಲದೆ, ಅಕ್ರಮವಾಗಿ ಚೀನಾದ ಪೈಲಟ್‌ಗಳಿಗೆ ರಕ್ಷಣಾ ಸೇವೆಗಳನ್ನು ಒದಗಿಸಿದ್ದು, ರಹಸ್ಯ ತರಬೇತಿ ನೀಡಿದ್ದಾರೆಂಬ ಆರೋಪದ ಮೇಲೆ ಇಂಡಿಯಾನ ಪೊಲೀಸರು ಇವರನ್ನು ಬಂಧಿಸಿದ್ದಾರೆ.

**ಅಮೆರಿಕಗೆ ದ್ರೋಹ ಬಗೆದಿದ್ದಾನೆಂದು ಎಫ್‌ಬಿಐ ಅಧಿಕಾರಿ:** ಇನ್ನು, ಘಟನೆಯ ಕುರಿತು ಹೇಳಿಕೆ ನೀಡರುವ



ಉಲ್ಲಂಘನೆ ಮಾಡಿದ ಆರೋಪ

ಎಫ್‌ಬಿಐ ಗುಪ್ತಚರ ಮತ್ತು ಬೇಹುಗಾರಿಕೆ ವಿಭಾಗದ ಸಹಾಯಕ ನಿರ್ದೇಶಕ ರೋಮನ್ ರೋಜಾವ್ಸ್ಕಿ ಬ್ರೌನ್ ತಾನು ರಕ್ಷಣೆ ಮಾಡುವುದಾಗಿ ಪ್ರಮಾಣ ಮಾಡಿದವರ ವಿರುದ್ಧ ಹೋರಾಡಲು ಚೀನೀ ಚೀನೀ ಪೈಲಟ್‌ಗಳಿಗೆ ತರಬೇತಿ ನೀಡುವ ಮೂಲಕ ತನ್ನ ದೇಶಕ್ಕೆ ದ್ರೋಹ ಬಗೆದಿದ್ದಾನೆ.

**ರಾಷ್ಟ್ರೀಯ ಭದ್ರತಾ ಕಾನೂನು ಉಲ್ಲಂಘನೆ ಈ ಕುರಿತು ಮಾಹಿತಿ ನೀಡಿರುವ ಅಮೆರಿಕದ ನ್ಯಾಯಾಂಗ ಇಲಾಖೆ ಬಂಧಿತ ಬ್ರೌನ್ ಅವರಿಗೆ 2 ದಶಕಗಳ ಕಾಲದ ಮಿಲಿಟರಿ ಅನುಭವವನ್ನು ಹೊಂದಿದ್ದು, ಅಮೆರಿಕದ ಹಲವು ಸೂಕ್ಷ್ಮ ಘಟಕಗಳನ್ನು ಮುನ್ನಡೆಸಿದ್ದಾರೆ. ಇವರನ್ನು ಗಣ್ಯ ಯುದ್ಧ ಪೈಲಟ್ ಎಂದು ಪರಿಗಣಿಸಲಾಗಿತ್ತು. ಆದರೆ, ಈತ ತನ್ನ ಅಮೂಲ್ಯ ಮಿಲಿಟರಿ ಜ್ಞಾನ, ಕೌಶಲ್ಯವನ್ನು ವಿದೇಶಿ ಮಿಲಿಟರಿಗಳು ಗುರಿಯಾಗಿಸಿಕೊಂಡು ಅಕ್ರಮವಾಗಿ ನೇಮಕ ಮಾಡಿಕೊಂಡಿದ್ದಾರೆ. ಇದು ಅಮೆರಿಕದ ಶಸ್ತ್ರಾಸ್ತ್ರ ರಫ್ತು ನಿಯಂತ್ರಣ ಕಾಯ್ದೆ ಉಲ್ಲಂಘಿಸಿದ್ದು, ಉದ್ದೇಶಪೂರ್ವಕವಾಗಿ ತರಬೇತಿ ನೀಡಿದ್ದಾನೆ. ಈ ಘಟನೆ ರಾಷ್ಟ್ರೀಯ ಭದ್ರತಾ ವಿಚಾರಗಳ ಬಗ್ಗೆ ಕಳವಳವನ್ನು ಹುಟ್ಟುಹಾಕುವಂತಿದೆ ಎಂದು ತಿಳಿಸಿದ್ದಾರೆ.**

**ರಾಷ್ಟ್ರೀಯ ಭದ್ರತೆಯಗೆ ಆತಂಕ**

**ಅಮೆರಿಕದ ವಾಯುಪಡೆಯ ಮಾಜಿ ಹಿರಿಯ ಮೇಜರ್ ಒಬ್ಬರು ಚೀನಾದ ಮಿಲಿಟರಿ ಪೈಲಟ್‌ಗಳಿಗೆ ರಹಸ್ಯವಾಗಿ ತರಬೇತಿ ನೀಡಿದ್ದಾರೆಂಬ ಆರೋಪದಲ್ಲಿ ಇಂಡಿಯಾನ ಪೊಲೀಸರು ಬಂಧಿಸಿದ್ದಾರೆ. ಈತ ಅಮೆರಿಕದ ರಕ್ಷಣಾ ವ್ಯವಸ್ಥೆಯ ಹಲವು ಸೂಕ್ಷ್ಮ ಘಟಕಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಆದರೆ, ಕಾನೂನು ಉಲ್ಲಂಘಿಸಿ ಚೀನಿ ಮಿಲಿಟರಿಗೆ ಅಕ್ರಮವಾಗಿ ತರಬೇತಿ ನೀಡುವ ಮೂಲಕ ದೇಶಕ್ಕೆ ದ್ರೋಹ ಬಗೆದಿದ್ದು, ಇದು ರಾಷ್ಟ್ರೀಯ ಭದ್ರತೆಯಗೆ ಆತಂಕವನ್ನುಂಟು ಮಾಡಿದೆ ಎಂದು ಎಫ್‌ಬಿಐ ಅಧಿಕಾರಿಗಳು ತಿಳಿಸಿದ್ದಾರೆ. ಈ ಘಟನೆ ಸದ್ಯ ಅಮೆರಿಕದ ರಕ್ಷಣಾ ವ್ಯವಸ್ಥೆಗೆ ಅಪಾಯದ ಆತಂಕವನ್ನುಂಟು ಮಾಡಿದೆ.**

ಅಲ್ಲದೆ, ಚೀನಾದ ಮಿಲಿಟರಿ ಸಾಮರ್ಥ್ಯಗಳನ್ನು ಆಧುನೀಕರಿಸಲು ಚೀನಾ ಸರ್ಕಾರವು ಅಮೆರಿಕದ ಸಶಸ್ತ್ರ ಪಡೆಗಳ ಪ್ರಸ್ತುತ, ಮಾಜಿ ಸದಸ್ಯರ ಪರಿಣತಿಯನ್ನು ಬಳಸಿಕೊಳ್ಳುವುದನ್ನು ಮುಂದುವರೆಸಿದ್ದು, ಇಂತಹ ಕಾರ್ಯಗಳನ್ನು ಮಾಡುವವರಿಗೆ ಈ ಬಂಧನವು ಒಂದು ಎಚ್ಚರಿಕೆಯ ಗಂಟೆಯಂತೆ ಕಾರ್ಯನಿರ್ವಹಿಸುತ್ತದೆ ಎಂದು ತಿಳಿಸಿದ್ದಾರೆ. ಇದು ಅಮೆರಿಕದಲ್ಲಿ ರಕ್ಷಣಾ ಅಧಿಕಾರಿಗಳಲ್ಲಿ ಸದ್ಯ ಆತಂಕಕ್ಕೆ ಕಾರಣವಾಗಿದ್ದು, ಇತ್ತೀಚೆಗೆ ಈ ಬ್ರೌನ್ ಚೀನಾಗೆ ಹಲವು ಬಾರಿ ಭೇಟಿ ನೀಡಿದ್ದು, ಹಲವು ಸೂಕ್ಷ್ಮ ವಿಚಾರಗಳನ್ನು ಚೀನಾದ ಮಿಲಿಟರಿ ಕಮಾಂಡರ್‌ಗಳ ಬಳಿ ಹಂಚಿಕೊಂಡಿರುವ ಸಾಧ್ಯತೆಯಿದ್ದು, ಇದು ಚೀನಿಯರು ತಮ್ಮ ಮಿಲಿಟರಿ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಹೇಗೆ ಪಾಶ್ಚಿಮಾತ್ಯ ಮಿಲಿಟರಿ ಪ್ರತಿಭೆಯನ್ನು ಗುರಿಯಾಗಿಸಿಕೊಂಡಿದೆ ಎಂಬುದನ್ನು ಎತ್ತಿತೋರಿಸುವಂತಿದ್ದು, ಇದು ಕೇವಲ ಅಮೆರಿಕಗೆ ಮಾತ್ರವಲ್ಲದೆ, ತನ್ನ ಮಿತ್ರ ರಾಷ್ಟ್ರಗಳ ರಕ್ಷಣಾ ವ್ಯವಸ್ಥೆಗಳಿಗೆ ಅಪಾಯವನ್ನುಂಟು ಮಾಡುವಂತಿದೆ ಎಂದು ಅಧಿಕಾರಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

